# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

| ಸಂಪುಟ ೧೬೧<br>Volume 161 | ಮೈಸೂರು, ಶನಿವಾರ, ೩೧, ಜನವರಿ, ೨೦೨೬ (ಮಾಘ , ೧೧, ಶಕವರ್ಷ, ೧೯೪೭)<br>MYSURU, SATURDAY, 31, JANURAY , 2026 ( MAGHA , 11 SHAKAVARSHA, 1947) | ಸಂಚಿಕೆ ೧೦<br>Issue 10 |
|---|---|---|


## ಭಾಗ ೬ಎ

**ಮೈಸೂರು ವಿಭಾಗಕ್ಕೆ ಮತ್ತು ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ದಕ್ಷಿಣಕನ್ನಡ, ಕೊಡಗು, ಚಾಮರಾಜನಗರ, ಉಡುಪಿ ಜಿಲ್ಲೆಗಳಿಗೆ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು.**

**(ಕಂದಾಯ ಇಲಾಖೆ)**

**ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಯವರ ಕಾರ್ಯಾಲಯ,**
**"ಪ್ರಜಾ ಸೌಧ, ದಕ್ಷಿಣ ಕನ್ನಡ ಜಿಲ್ಲಾ ಆಡಳಿತ ಕೇಂದ್ರ"**
**DEPUTY COMMISSIONER & DISTRICT MAGISTRATE'S OFFICE, "PRAJA SOUDHA, DAKSHINA KANNADA, ZILLA ADALITHA KENDRA"**


**PADIL, MANGALURU- 575007 ಪಡೀಲು, ಮಂಗಳೂರು – 575007**
**Phone: 0824-2220584, 2220590 Fax: 0824-2441564, Email: dc.mnglr@gmail.com Website:www.dk.nic.in**


ನಂ:ಆರ್.ಟಿ.ಎ:ಸಿಆರ್: 312/2025/ಇ-1062711/ಸಿ6 ದಿನಾಂಕ: 30 .01.2026

## ಅಧಿಸೂಚನೆ

ವಿಷಯ: ಮೋಟಾರು ವಾಹನ ಕಾಯ್ದೆ 1988 ರ ಕಲಂ 115ರಡಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ಸುಗಳಿಗೆ ವಿನಾಯಿತಿ ನೀಡುವ ಬಗ್ಗೆ.

ಉಲ್ಲೇಖ: 1) ಆಯುಕ್ತರು, ಮಂಗಳೂರು ಮಹಾನಗರ ಪಾಲಿಕೆ , ಮಂಗಳೂರು ರವರ ಪತ್ರ ಸಂ:ಮ.ನ.ಪಾ/ಸಾ/ಸಿ.ಆರ್.5/2025-26, ದಿನಾಂಕ:29-11-2025.

2) ಉಪ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ( ಪದವಿ ಪೂರ್ವ, ದ.ಕ. ಜಿಲ್ಲೆ, ಮಂಗಳೂರು ರವರ ಪತ್ರ ಸಂಖ್ಯೆ: ಶಾಶಿಇ(ಪಪೂ)/ಸುತ್ತೋಲೆ/2025-26, ದಿನಾಂಕ: 27-01-2026.

3) ಉಪನಿರ್ದೇಶಕರು (ಆಡಳಿತ) ಶಾಲಾ ಶಿಕ್ಷಣ ಇಲಾಖೆ, ಮಂಗಳೂರು, ದ.ಕ. ರವರ ಪತ್ರ ಸಂಖ್ಯೆ: ಆ.ಶಾ.ಇತರೆ/2025-26, ದಿನಾಂಕ: 27-01-2026.

4) ಉಪಸಾರಿಗೆ ಆಯುಕ್ತರು ಹಾಗೂ ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿ, ಮಂಗಳೂರು, ದ.ಕ. ರವರ ಪತ್ರ ಸಂಖ್ಯೆ: ಆರ್.ಟಿ.ಎ./ಬಿ-1/115ಜಿ.ಅ/25-26, ದಿನಾಂಕ: 28-11-2025.

5) ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮಂಗಳೂರು ರವರ ಪತ್ರ ದಿನಾಂಕ:29-01-2020.

6) ಜಿಲ್ಲಾ ಶಸ್ತ್ರ ಚಿಕಿತ್ಸಕರು ಮತ್ತು ಅಧೀಕ್ಷಕರು, ವೆನ್ ಲಾಕ್ ಜಿಲ್ಲಾ ಆಸ್ಪತ್ರೆ,

ಮಂಗಳೂರು ರವರ ಪತ್ರ ಸಂಖ್ಯೆ: ವೆನ್ ಲಾಕ್/ಜಿಎನ್ ಎಲ್/209/2025-26,
ದಿನಾಂಕ: 06-12-2025.

7) ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ, ಕರಾರಸಾ.ನಿಗಮ ಮಂಗಳೂರು ವಿಭಾಗ, ಮಂಗಳೂರು ರವರ ಪತ್ರ ಸಂಖ್ಯೆ: ಕರಾಸ: ಮಂವಿ:ಸಂಚಾರ:2552: 2025-26/ ದಿನಾಂಕ: 22-12-2025.

8) ವೈದ್ಯಕೀಯ ಅಧೀಕ್ಷಕರು, ಸರಕಾರಿ ಲೇಡಿಗೋಶನ್ ಆಸ್ಪತ್ರೆ, ಮಂಗಳೂರು ರವರ ಪತ್ರ ಸಂಖ್ಯೆ: ಜಿ.ಎನ್. ಎಲ್.(2)7/2025-26, ದಿನಾಂಕ:30-01-2026.

******

**ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯವರು ಮೋಟಾರು ವಾಹನ ಕಾಯ್ದೆ 1988 ರ ಕಲಂ 115 ರಡಿಯಲ್ಲಿ ಹೊರಡಿಸಿರುವ ಆದೇಶಗಳ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ಆದೇಶಗಳ ಸಂಕ್ಷಿಪ್ತ ವಿವರಣೆ:**

1) 05-01-1991 ಈ ಕಛೇರಿಯ ಅಧಿಸೂಚನೆ ಸಂ.ಆರ್.ಟಿ.ಎ:ಸಿಆರ್:268/90-91 ದಿನಾಂಕ:05-01-1991 ರಂದು ಹೊಸದಾಗಿ ನೀಡಲಾಗುವ ಪರ್ಮಿಟ್‌ಗಳು ಹೊಂದುವ ನಗರ ಸಾರಿಗೆ ಬಸ್ಸುಗಳ ಚಾಲನೆಯನ್ನು ನಿರ್ಬಂದಿಸಿ ಈ ಕೆಳಗಿನಂತೆ ಆದೇಶಿಸಲಾಗಿರುತ್ತದೆ.

1. ಮರವೂರು, ಬೋಂದೇಲ್, ಕೆ.ಪಿ.ಟಿ. ಕಡೆಯಿಂದ ಬರುವ ನಗರ ಸಾರಿಗೆ ಬಸ್ಸುಗಳು ಕೆ.ಪಿ.ಟಿ. ತನಕ ಬಂದು ಕೆ.ಪಿ.ಟಿ. ಸಮೀಪ ನಿಲುಗಡೆಯಾಗುವುದು.
2. ಗುರುಪುರ, ಕುಲಶೇಖರ ಕಡೆಯಿಂದ ಬರುವ ನಗರ ಸಾರಿಗೆ ಬಸ್ಸುಗಳು ಮಲ್ಲಿಕಟ್ಟೆ ತನಕ ಬಂದು ಮಲ್ಲಿಕಟ್ಟೆ ಸ್ಥಾನದಲ್ಲಿ ನಿಲುಗಡೆಯಾಗುವುದು.
3. ತಲಪಾಡಿ-ಉಳ್ಳಾಲ, ಕೋಣಾಜೆ, ತೊಕ್ಕೊಟ್ಟು, ಪಡೀಲ್ ಮತ್ತು ನಾಗುರಿ ಕಡೆಯಿಂದ ಬರುವ ನಗರ ಸಾರಿಗೆ ಬಸ್ಸುಗಳು ಕಂಕನಾಡಿ ತನಕ ಬಂದು ಕಂಕನಾಡಿಯಲ್ಲಿ ನಿಲುಗಡೆಯಾಗುವುದು.
4. ಸುರತ್ಕಲ್, ಕೂಳೂರು, ಕೊಟ್ಟಾರ, ಉರ್ವಸ್ಟೋರ್ ಮತ್ತು ಉರ್ವಮಾರ್ಕೆಟ್ ಕಡೆಯಿಂದ ಬರುವ ನಗರ ಸಾರಿಗೆ ಬಸ್ಸುಗಳು ಲೇಡಿಹಿಲ್ ತನಕ ಬಂದು ಲೇಡಿಹಿಲ್ ಸರ್ಕಲ್ ನಿಲುಗಡೆ ಸ್ಥಾನದಲ್ಲಿ ನಿಲುಗಡೆಯಾಗುವುದು.

ಅಲ್ಲದೆ ನಗರ ಸಾರಿಗೆ ಬಸ್ಸುಗಳು ಈ ಮೇಲೆ ಕಾಣಿಸಿರುವ ಕ್ರಮಾಂಕ 1 ರಿಂದ 4ರ ತನಕ ಹೇಳಿದ ಕಡೆಗಳಿಂದ ಅಲ್ಲದೇ ಬೇರೆ ಇನ್ನಾವುದೇ ಕಡೆಯಿಂದ ಹಂಪನಕಟ್ಟೆ ಮತ್ತು ಸ್ಟೇಟ್ ಬ್ಯಾಂಕ್ ವಠಾರವನ್ನು ಪ್ರವೇಶಿಸಿ ಚಲಿಸುವುದನ್ನು ಕೂಡಾ ನಿರ್ಬಂದಿಸಲಾಗಿರುತ್ತದೆ.

ಮೇಲೆ ಹೇಳಿದ ನಿರ್ಬಂಧ ವ ನಿಯಂತ್ರಣ ಇನ್ನೂ ಮುಂದೆ ಹೊಸತಾಗಿ ಪರ್ಮಿಟ್ ಹೊಂದಿ ಚಾಲನೆಗೆ ಬರುವ ನಗರ ಸಾರಿಗೆ ಬಸ್ಸುಗಳಿಗೆ ಮಾತ್ರ ಅನ್ವಯಿಸುವುದಲ್ಲದೆ ಇದು ಈಗಾಗಲೇ ಪರ್ಮಿಟ್ ಹೊಂದಿ ಚಾಲನೆಯಲ್ಲಿರುವ ನಗರ ಸಾರಿಗೆ ಬಸ್ಸುಗಳಿಗೆ ಅನ್ವಯಿಸುವುದಿಲ್ಲ.

ಗ್ರಾಮೀಣ ಸಾರಿಗೆ ಬಸ್ಸುಗಳು ಹಂಪನಕಟ್ಟೆಯಲ್ಲಿ ಪೊಲೀಸ್ ಸಿಗ್ನಲ್ ಪಾಯಿಂಟ್ ನಿಂದ ಮುಂದೆ ಸ್ಟೇಟ್ ಬ್ಯಾಂಕ್ ಕಡೆ ಚಲಿಸುತ್ತಿಲ್ಲವಾದುದರಿಂದ ಗ್ರಾಮೀಣ ಸಾರಿಗೆ ಬಸ್ಸುಗಳಿಗೆ ಈ ನಿರ್ಬಂಧ ಅನ್ವಯಿಸುವುದಿಲ್ಲ.

2) 06-04-1993 ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಆರ್.ಟಿ.ಎ.ಸಿಆರ್:182/92-93 ರಲ್ಲಿ ದಿ:06-04-1993 ರಂದು ಹೊಸದಾಗಿ ನೀಡಲಾಗುವ ಪರ್ಮಿಟ್‌ಗಳು ಹೊಂದುವ ಗ್ರಾಮಾಂತರ (mofussil bus) ಸಾರಿಗೆ ಬಸ್ಸುಗಳ ಚಾಲನೆಯನ್ನು ನಿರ್ಬಂದಿಸಿ ಈ ಕೆಳಗಿನಂತೆ ಆದೇಶಿಸಲಾಗಿರುತ್ತದೆ.

1. ಮರವೂರು, ಬೋಂದೇಲ್, ಕೆ.ಪಿ.ಟಿ. ಕಡೆಯಿಂದ ಬರುವ ಗ್ರಾಮಾಂತರ ಸಾರಿಗೆ ಬಸ್ಸುಗಳು ಕೆ.ಪಿ.ಟಿ.ತನಕ ಬಂದು ಕೆ.ಪಿ.ಟಿ. ಸಮೀಪ ನಿಲುಗಡೆಯಾಗುವುದು.
2. ಗುರುಪುರ, ಕುಲಶೇಖರ ಕಡೆಯಿಂದ ಬರುವ ಗ್ರಾಮಾಂತರ ಸಾರಿಗೆ ಬಸ್ಸುಗಳು ಕದ್ರಿ

ಮಲ್ಲಿಕಟ್ಟೆ ತನಕ ಬಂದು ಮಲ್ಲಿಕಟ್ಟೆ ಸ್ಥಾನದಲ್ಲಿ ನಿಲುಗಡೆಯಾಗುವುದು.

3. ತಲಪಾಡಿ-ಉಳ್ಳಾಲ, ಕೋಣಾಜೆ, ತೊಕ್ಕೊಟ್ಟು, ಪಡೀಲ್ ಮತ್ತು ನಾಗುರಿ ಕಡೆಯಿಂದ ಬರುವ ಗ್ರಾಮಾಂತರ ಸಾರಿಗೆ ಬಸ್ಸುಗಳು ಕಂಕನಾಡಿ ತನಕ ಬಂದು ಕಂಕನಾಡಿಯಲ್ಲಿ ನಿಲುಗಡೆಯಾಗುವುದು.
4. ಸುರತ್ಕಲ್, ಕೂಳೂರು, ಕೊಟ್ಟಾರ, ಉರ್ವಸ್ಟೋರ್ ಮತ್ತು ಉರ್ವಮಾರ್ಕೆಟ್ ಕಡೆಯಿಂದ ಬರುವ ಗ್ರಾಮಾಂತರ ಸಾರಿಗೆ ಬಸ್ಸುಗಳು ಲೇಡಿಹಿಲ್ ತನಕ ಬಂದು ಲೇಡಿಹಿಲ್ ಸರ್ಕಲ್ ನಿಲುಗಡೆ ಸ್ಥಾನದಲ್ಲಿ ನಿಲುಗಡೆಯಾಗುವುದು.

3) 22-06-2005 ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಆರ್.ಟಿ.ಎ.ಸಿಆರ್:6/2005-06 ದಿ:22-06-2005 ರಲ್ಲಿ ಸರ್ಕಾರಿ (ಕೆ.ಎಸ್.ಆರ್.ಟಿ.ಸಿ.) ಸ್ವಾಮ್ಯದ ಮಜಲು ವಾಹನಗಳಿಗೆ ಈಗಾಗಲೇ ಜಾರಿಯಲ್ಲಿರುವ ದಿನಾಂಕ:6-4-93 ರ ಅಧಿಸೂಚನೆ ಅನ್ವಯಿಸುವುದಿಲ್ಲವೆಂಬುದಾಗಿ, ಸರ್ಕಾರಿ ಸ್ವಾಮ್ಯದ ಬಸ್ಸುಗಳು ಮಂಗಳೂರು ನಗರದ ಸ್ಟೇಟ್ ಬ್ಯಾಂಕ್ ಪ್ರದೇಶ ಪ್ರವೇಶಿಸಲು ಅನುಮತಿ ನೀಡಿ ಮೇಲಿನ ಅಧಿಸೂಚನೆಯಲ್ಲಿರುವ ನಿಷೇದಾಜ್ಞೆಯಿಂದ ವಿನಾಯಿತಿ ನೀಡಿದೆ.

ಸರ್ಕಾರಿ ಸ್ವಾಮ್ಯದ ಮಜಲು ವಾಹನಗಳನ್ನು ಹೊರತುಪಡಿಸಿ ಬೇರೆ ಎಲ್ಲಾ ಖಾಸಗಿ ಮಜಲು ವಾಹನಗಳಿಗೆ ಮೇಲ್ಕಂಡ ದಿನಾಂಕ: 06-04-1993 ರ ಅಧಿಸೂಚನೆಯಲ್ಲಿ ನಮೂದಿಸಿದ ನಿಷೇಧಾಜ್ಞೆಯಲ್ಲಿರುವ ಎಲ್ಲಾ ಶರ್ತ /ನಿರ್ಭಂದನೆಗಳು ಮುಂದುವರಿಯುವುದು.

4) 11-09-2013 ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಆರ್.ಟಿ.ಎ.ಸಿಆರ್:65/2013-14 ದಿ:11-09-2013 ರಂದು ಹೊಸದಾಗಿ ನೀಡಲಾಗುವ ಪರ್ಮಿಟ್‌ಗಳು ಹೊಂದುವ ಗ್ರಾಮಾಂತರ (mofussil bus) ಸಾರಿಗೆ ಬಸ್ಸುಗಳ ಚಾಲನೆಯನ್ನು ನಿರ್ಬಂದಿಸಿ ಈ ಕೆಳಗಿನಂತೆ ಆದೇಶಿಸಲಾಗಿರುತ್ತದೆ.

1. ಮರವೂರು, ಬೋಂದೇಲ್, ಕೆ.ಪಿ.ಟಿ. ಕಡೆಯಿಂದ ಬರುವ ಗ್ರಾಮಾಂತರ ಸಾರಿಗೆ ಬಸ್ಸುಗಳು ಕೆ.ಪಿ.ಟಿ.ತನಕ ಬಂದು ಕೆ.ಪಿ.ಟಿ. ಸಮೀಪ ನಿಲುಗಡೆಯಾಗುವುದು.
2. ಗುರುಪುರ, ಕುಲಶೇಖರ ಕಡೆಯಿಂದ ಬರುವ ಗ್ರಾಮಾಂತರ ಸಾರಿಗೆ ಬಸ್ಸುಗಳು ಮಲ್ಲಿಕಟ್ಟೆ ತನಕ ಬಂದು ಮಲ್ಲಿಕಟ್ಟೆ ಸ್ಥಾನದಲ್ಲಿ ನಿಲುಗಡೆಯಾಗುವುದು.
3. ತಲಪಾಡಿ-ಉಳ್ಳಾಲ, ಕೋಣಾಜೆ, ತೊಕ್ಕೊಟ್ಟು, ಪಡೀಲ್ ಮತ್ತು ನಾಗುರಿ ಕಡೆಯಿಂದ ಬರುವ ಗ್ರಾಮಾಂತರ ಸಾರಿಗೆ ಬಸ್ಸುಗಳು ಕಂಕನಾಡಿ ತನಕ ಬಂದು ಕಂಕನಾಡಿಯಲ್ಲಿ ನಿಲುಗಡೆಯಾಗುವುದು ಅಲ್ಲದೆ ಇನ್ನು ಮುಂದೆ ಹೊಸದಾಗಿ ಪರ್ಮಿಟ್ ಹೊಂದಿ ಚಾಲನೆಗೆ ಬರುವ ಬಸ್ಸುಗಳು ಮಂಗಳಾದೇವಿಯನ್ನು ಪ್ರವೇಶಿಸುವುದನ್ನು ನಿಷೇಧಿಸಲಾಗಿದೆ.
4. ಸುರತ್ಕಲ್, ಕೂಳೂರು, ಕೊಟ್ಟಾರ ಕಡೆಯಿಂದ ಬರುವ ಗ್ರಾಮಾಂತರ ಸಾರಿಗೆ ಬಸ್ಸುಗಳು ಕೊಟ್ಟಾರ ಇನ್‌ಫೋಸಿಸ್ ತನಕ ಬಂದು ಕೊಟ್ಟಾರ ಇನ್‌ಫೋಸಿಸ್ ಸಮೀಪ ನಿಲುಗಡೆಯಾಗುವುದು ಮತ್ತು ಯಾವುದೇ ಭಾಗದಿಂದ ಸಿಟಿಯನ್ನು ಪ್ರವೇಶಿಸುವಂತಿಲ್ಲ. ಅಂತರ್ ಜಿಲ್ಲಾ ಪರವಾನಿಗೆಯನ್ನು ಹೊಂದಿರುವ ಸರ್ಕಾರಿ ಸ್ವಾಮ್ಯದ ಬಸ್ಸುಗಳು ಪಂಪ್‌ವೆಲ್-ಕಂಕನಾಡಿ-ಜ್ಯೋತಿ-ಬಂಟ್ಸ್ ಹಾಸ್ಟೆಲ್-ಪಿ.ವಿ.ಎಸ್. ಸರ್ಕಲ್ –ಲಾಲ್‌ಬಾಗ್-ಕೆ.ಎಸ್.ಆರ್.ಟಿ.ಸಿ. ಬಸ್ಸು ನಿಲ್ದಾಣ-ಬಿಜೈ-ಕೆ.ಪಿ.ಟಿ. ಸಂಚರಿಸುವುದು.

5) 05-07-2016 ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಆರ್.ಟಿ.ಎ.ಸಿಆರ್:19/2016-17 ದಿ:05-07-2016 ರಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಸಲ್ಲಿಸಿರುವ 17 ಮಾರ್ಪಾಡು ಅರ್ಜಿಗಳಿಗೆ ಸಂಬಂಧಿಸಿದಂತೆ ಆರ್.ಟಿ.ಎ.65/2013-14/112800 ದಿನಾಂಕ:11-09-2013 ರ ಅಧಿಸೂಚನೆಯಿಂದ 17 ಪರ್ಮಿಟ್ ಗಳಿಗೆ ವಿನಾಯಿತಿ ನೀಡಲಾಗಿ ಪರವಾನಿಗೆಯನ್ನು ವಿತರಿಸಲಾಗಿತ್ತು. ಇತರ ಎಲ್ಲಾ ಅಧಿಸೂಚನೆಗಳು ಹಿಂದಿನಂತೆ ಮುಂದುವರೆಯುವುದು.

6) 07-03-2019 ಕರ್ನಾಟಕ ರಾಜ್ಯ ಸರಕಾರವು ದಿನಾಂಕ:07-03-2019 ರಂದು ತನ್ನ ವಿಶೇಷ ರಾಜ್ಯ ಪತ್ರಿಕೆಯಲ್ಲಿ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಮೋಟಾರು ವಾಹನಗಳ ಕಾಯ್ದೆ 1988 ರ ಸೆಕ್ಷನ್ 99 ಮತ್ತು 100 ಸಬ್ ಸೆಕ್ಷನ್ (3) ರನ್ವಯ ಕರ್ನಾಟಕ ರಾಜ್ಯದಲ್ಲಿನ ಪ್ರದೇಶ ಮತ್ತು ಮಾರ್ಗಗಳ ಸಂಬಂಧದಲ್ಲಿ ಹಾಲಿ ಇರುವ ಯೋಜನೆಗಳ ಹೊರತಾಗಿ ಏಕೈಕ "ಸಮಗ್ರ ಪ್ರದೇಶ ಯೋಜನೆ" (Comprehensive Area Scheme) ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳು ಹಾಗೂ ಸಹ ಸಂಸ್ಥೆಗಳು ಮಾತ್ರ ಮಜಲು ಸಾರಿಗೆಗಳನ್ನು ಪ್ರಾರಂಭಿಸಬೇಕಾಗಿರುತ್ತದೆ /ಒದಗಿಸಬೇಕಾಗಿರುತ್ತದೆ.

ಸಾಮಾನ್ಯ ಪ್ರಕರಣಗಳಲ್ಲಿ ಕಲಂ 72 ಮತ್ತು 80 ರಡಿಯಲ್ಲಿ ಪರವಾನಿಗೆಗಳನ್ನು ಕೋರಿದಾಗ ಮಂಜೂರಾತಿಯ ಅವಶ್ಯಕತೆಯಿದ್ದು ಅದನ್ನು ನಿರ್ಧರಿಸಿದ ನಂತರವೇ ಪರವಾನಿಗೆ ನೀಡುವುದು ಕಾನೂನಿನ ಕ್ರಮವಾಗಿರುತ್ತದೆ.

**<u>ವಿವಿಧ ಇಲಾಖೆಗಳು ಕ್ಷೇತ್ರವಾರು ಸಲ್ಲಿಸಿರುವ ವಿವರಗಳು ಈ ಕೆಳಗಿನಂತಿರುತ್ತದೆ</u>**

**ಸಾರಿಗೆ ಇಲಾಖೆ:-**ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ದಕ್ಷಿಣ ಕನ್ನಡದಿಂದ ಮಂಜೂರಾದ ಮಜಲು ವಾಹನಗಳ ಪರವಾನಿಗೆಯ ವಿವರಗಳು ಈ ಕೆಳಗಿನಂತಿವೆ.

| ತಾಲ್ಲೂಕು | ಮಜಲು ವಾಹನಗಳು | | | |
|---|---|---|---|---|
| | ನಗರ ಸಾರಿಗೆ | | ಗ್ರಾಮಾಂತರ ಸಾರಿಗೆ | |
| | ಖಾಸಗಿ | ಕ.ರಾ.ರ.ಸಾ | ಖಾಸಗಿ | ಕ.ರಾ.ರ.ಸಾ |
| ಮಂಗಳೂರು | 321 | 43 | 658 | 40 |

ಮುಂದುವರೆದು, ದಿನಾಂಕ: 05-01-1991, 06-04-1993 ಮತ್ತು 11-09-2013 ರ ಅಧಿಸೂಚನೆಯಲ್ಲಿ ಉಲ್ಲೇಖಿಸಿರುವಂತೆ ಮಂಗಳೂರು ನಗರಕ್ಕೆ ವಿವಿಧ ಭಾಗಗಳಿಂದ ಪ್ರವೇಶಿಸುವ ಬಸ್ಸುಗಳನ್ನು ನಗರದ ನಿಲುಗಡೆ ಸ್ಥಳಗಳಾದ ಕೆ.ಪಿ.ಟಿ. , ಮಲ್ಲಿಕಟ್ಟೆ, ಕಂಕನಾಡಿ, ಲೇಡಿಹಿಲ್ ಸರ್ಕಲ್, ಕೊಟ್ಟಾರ ಇನ್‌ಫೋಸಿಸ್ ನಲ್ಲಿ ನಿಲುಗಡೆಗೊಳಿಸುತ್ತಿರುವುದರಿಂದ ಸದರಿ ಸ್ಥಳಗಳಿಂದ ನಗರದ ಕೇಂದ್ರ ಭಾಗವಾದ ಸ್ಟೇಟ್ ಬ್ಯಾಂಕ್ ಮತ್ತು ಸ್ಟೇಟ್ ಬ್ಯಾಂಕ್ ಸುತ್ತಮುತ್ತಲಿನ ವಿವಿಧ ಸರ್ಕಾರಿ ಕಚೇರಿಗಳಿಗೆ , ಆಸ್ಪತ್ರೆ , ಕೇಂದ್ರ ರೈಲ್ವೇ ನಿಲ್ದಾಣ ಮತ್ತು ವಿಶ್ವವಿದ್ಯಾಲಯ, ಖಾಸಗಿ – ಸರ್ಕಾರಿ ಶಿಕ್ಷಣ ಸಂಸ್ಥೆಗಳಿಗೆ ತಲುಪಲು ಉಂಟಾಗುತ್ತಿರುವ ಸಮಸ್ಯೆ ಮತ್ತು ಹೆಚ್ಚುವರಿ ದರ ಪಾವತಿಯ ವಿವರಗಳು ಈ ಕೆಳಗಿನಂತಿವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂಚರಿಸುವ ಆಟೋರಿಕ್ಷಾಗಳ ಪ್ರಯಾಣ ದರವನ್ನು ದಿನಾಂಕ:15.11.2022 ರಿಂದ ಅನ್ವಯವಾಗುವಂತೆ ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟು ಪ್ರಯಾಣ ದರವನ್ನು ನಿಗದಿ ಪಡಿಸಲಾಗಿರುತ್ತದೆ.

| | |
|---|---|
| ಕನಿಷ್ಟ ದರ ಮೊದಲ 1.5 ಕಿಮೀ. | ರೂ.35-00 (ಗರಿಷ್ಟ 3 ಜನ ಪ್ರಯಾಣಿಕರು) |
| ನಂತರದ ಪ್ರತಿ ಕಿ.ಮೀಟರ್ ದರ | ರೂ.17-00 (ಗರಿಷ್ಟ 3 ಜನ ಪ್ರಯಾಣಿಕರು) |
| ಕಾಯುವ ದರಗಳು | ಮೊದಲ 15 ನಿಮಿಷ ಉಚಿತ<br>ನಂತರದ 15 ನಿಮಿಷದವರೆಗೆ ರೂ.5-00 |
| ಪ್ರಯಾಣಿಕರ ಸರಕಿಗೆ ಲಗೇಜ್ | 1) ಒಬ್ಬ ಪ್ರಯಾಣಿಕ ಕಡ್ಡಾಯವಾಗಿ ಜೊತೆ ಇರಬೇಕು.<br>2) ಮೊದಲ 20 ಕಿ.ಗ್ರಾಂ ಗಳಿಗೆ ಉಚಿತ ಹಾಗೂ ನಂತರ ರೂ.5.00 ಹಾಗೂ ಭಾಗದಂತೆ. |
| ರಾತ್ರಿ ವೇಳೆ ದರ | ರಾತ್ರಿ 10.00 ಗಂಟೆಯಿಂದ ಬೆಳಗಿನ ಜಾವ 05.00 ಗಂಟೆಯ ವರೆಗೆ ಮಾತ್ರ ಈ ಮೇಲಿನ ದರದ ಒಂದೂವರೆ ಪಟ್ಟು ದರವನ್ನು ಪ್ರಯಾಣಿಕರಿಂದ ಪಡೆಯಲು ಅವಕಾಶವಿದೆ. |

ಎಲ್ಲಾ ಖಾಸಗಿ ಮಜಲು ವಾಹನಗಳ ಪರಿಷ್ಕೃತ ದರ ಜಾರಿಯಾದ ದಿನಾಂಕ: 26-07-2021.

**<u>ನಗರ ಮತ್ತು ಗ್ರಾಮಾಂತರ ಸಾರಿಗೆ</u>**

| ಸ್ಟೇಜ್ ನಂ | ಕಿ.ಮೀ. | ದಿನಾಂಕ:26-07-2021 ಜಾರಿಗೆ ಬರುವಂತೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ನಿಗದಿಪಡಿಸಿದ ಪರಿಷ್ಕೃತ ದರ | |
|---|---|---|---|
| | | ನಗರ ಸಾರಿಗೆ | ಗ್ರಾಮಾಂತರ ಸಾರಿಗೆ |
| 1 | 0.1 - 2.0 | 12-00 | 12-00 |
| 2 | 2.1 - 4.0 | | |
| 3 | 4.1 - 6.0 | 15-00 | 15-00 |
| 4 | 6.1 - 8.0 | 16-00 | 16-00 |
| 5 | 8.1 - 10.0 | 18-00 | 18-00 |
| 6 | 10.1 - 12.0 | 19-00 | 19-00 |
| 7 | 12.1 - 14.0 | 20-00 | 20-00 |
| 8 | 14.1 - 16.0 | 21-00 | 21-00 |
| 9 | 16.1 - 18.0 | 22-00 | 22-00 |
| 10 | 18.1 - 20.0 | 23-00 | 23-00 |

**ಎಕ್ಸ್ ಪ್ರೆಸ್ ಹಾಗೂ ಷಟಲ್ ಬಸ್ ಗಳ ಪ್ರಯಾಣ ದರ.**

| ಸ್ಟೇಜ್ ನಂ | ಕಿ.ಮೀ. | ದಿನಾಂಕ:26-07-2021 ಜಾರಿಗೆ ಬರುವಂತೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ನಿಗದಿಪಡಿಸಿದ ಪರಿಷ್ಕೃತ ದರ |
|---|---|---|
| 1 | 0.1 - 6.50 | 12-00 |
| 2 | 6.6 - 13.00 | 19-00 |
| 3 | 13.1 - 19.5 | 25-00 |
| 4 | 19.5 - 26.00 | 32-00 |
| 5 | 26.1 - 32.5 | 40-00 |
| 6 | 32.6 - 39.0 | 49-00 |
| 7 | 39.1 - 45.5 | 55-00 |
| 8 | 45.6 - 52.0 | 63-00 |
| 9 | 52.1 - 58.5 | 70-00 |
| 10 | 58.6 - 65.0 | 78-00 |
| 11 | 65.1 - 71.5 | 85-00 |
| 12 | 71.6 - 78.0 | 92-00 |
| 13 | 78.1 - 84.5 | 99-00 |
| 14 | 84.6 - 91.0 | 107-00 |
| 15 | 91.1 - 97.5 | 115-00 |
| 16 | 97.6 - 104.0 | 122-00 |
| 17 | 104.1 -110.5 | 129-00 |
| 18 | 110.6 -117.0 | 137-00 |
| 19 | 117.1 -123.5 | 145-00 |

**ಟರ್ಮಿನಲ್ ಪಾಯಿಂಟ್ ಪ್ರಕಾರ - ಸಿಟಿ ಬಸ್ಸಿನ ಹಾಗೂ ಆಟೋರಿಕ್ಷಾ ಪ್ರಯಾಣ ದರ**

| ಟರ್ಮಿನಲ್ ಪಾಯಿಂಟ್ ನಿಂದ | ವರೆಗೆ | ದೂರ (ಕಿ.ಮೀ.) | ನಗರ ಸಾರಿಗೆ ಬಸ್ಸಿನಲ್ಲಿ ಒಬ್ಬ ಪ್ರಯಾಣಿಕರಿಗೆ ಏಕಮುಖ ಸಂಚಾರಕ್ಕೆ ಪ್ರಯಾಣ ದರ (ರೂ.) | ಆಟೋರಿಕ್ಷಾ ಪ್ರಯಾಣ ದರ (ರೂ.) |
|---|---|---|---|---|
| ಕೆ.ಪಿ.ಟಿ. | ಸ್ವೀಟ್‌ಬ್ಯಾಂಕ್ | 4.5 ಕಿ.ಮೀ. | 15.00/- | 86.00/- |
| ಮಲ್ಲಿಕಟ್ಟೆ | | 3.5 ಕಿ.ಮೀ. | 12.00/- | 69.00/- |
| ಕಂಕನಾಡಿ | | 3.00 ಕಿ.ಮೀ. | 12.00/- | 61.00/- |
| ಲೇಡಿಹಿಲ್ ಸರ್ಕಲ್ | | 5.5 ಕಿ.ಮೀ. | 15.00/- | 103.00/- |
| ಕೊಟ್ಟಾರ ಇನ್‌ಫೋಸಿಸ್ | | 6.7 ಕಿ.ಮೀ. | 16.00/- | 124.00/- |

ಮೇಲಿನ ಕೋಷ್ಟಕವನ್ನು ಗಮನಿಸಿದಾಗ - ಬೋಂದೇಲ್ ನಿಂದ ಕೆ.ಪಿ.ಟಿ. ವರೆಗೆ ಬಸ್ಸಿನಲ್ಲಿ ಪ್ರಯಾಣಿಸಿದಾಗ ರೂ. 15.00/- ದರವನ್ನು ಪಾವತಿಸಬೇಕಾಗಿದ್ದು, ಮುಂದುವರಿದು ಕೆ.ಪಿ.ಟಿ. ಯಿಂದ ಸ್ಟೇಟ್ ಬ್ಯಾಂಕ್ ಗೆ ಬಸ್ಸಿನಲ್ಲಿ ಪ್ರಯಾಣಿಸಿದಾಗ ತಗಲುವ ದರ ರೂ. 15.00/- ಆಗುತ್ತದೆ. ಆದ್ದರಿಂದ ಬೋಂದೇಲ್ ನಿಂದ ಸ್ಟೇಟ್ ಬ್ಯಾಂಕ್ ಗೆ ಬಸ್ಸಿನಲ್ಲಿ ಪ್ರಯಾಣಿಸಲು ಹೆಚ್ಚುವರಿಯಾಗಿ ರೂ.15.00/- ನ್ನು ಪಾವತಿಸಬೇಕಾಗಿರುತ್ತದೆ. ಆಟೋರಿಕ್ಷಾ ದಲ್ಲಿ ಪ್ರಯಾಣಿಸಿದರೆ ಹೆಚ್ಚುವರಿಯಾಗಿ ರೂ.86.00/- ದರವನ್ನು ಪಾವತಿಸಬೇಕಾಗಿರುತ್ತದೆ.

ಶಕ್ತಿನಗರದಿಂದ ಮಲ್ಲಿಕಟ್ಟೆ ವರೆಗೆ ಬಸ್ಸಿನಲ್ಲಿ ಪ್ರಯಾಣಿಸಿದಾಗ ರೂ.15.00/- ದರವನ್ನು ಪಾವತಿಸಬೇಕಾಗಿದ್ದು, ಮುಂದುವರಿದು ಮಲ್ಲಿಕಟ್ಟೆಯಿಂದ ಸ್ಟೇಟ್ ಬ್ಯಾಂಕ್ ಗೆ ಬಸ್ಸಿನಲ್ಲಿ ಪ್ರಯಾಣಿಸಿದಾಗ ತಗಲುವ ದರ ರೂ. 12.00/- ಆಗುತ್ತದೆ. ಆದ್ದರಿಂದ ಮಲ್ಲಿಕಟ್ಟೆಯಿಂದ ಸ್ಟೇಟ್ ಬ್ಯಾಂಕ್ ಗೆ ಬಸ್ಸಿನಲ್ಲಿ ಪ್ರಯಾಣಿಸಲು ಹೆಚ್ಚುವರಿಯಾಗಿ ರೂ.12.00/- ನ್ನು ಪಾವತಿಸಬೇಕಾಗಿರುತ್ತದೆ. ಆಟೋರಿಕ್ಷಾದಲ್ಲಿ ಪ್ರಯಾಣಿಸಿದರೆ ಹೆಚ್ಚುವರಿಯಾಗಿ ರೂ.69.00/- ದರವನ್ನು ಪಾವತಿಸಬೇಕಾಗಿರುತ್ತದೆ.

ತೊಕ್ಕೊಟ್ಟು ನಿಂದ ಕಂಕನಾಡಿ ವರೆಗೆ ಬಸ್ಸಿನಲ್ಲಿ ಪ್ರಯಾಣಿಸಿದಾಗ ರೂ. 16.00/- ದರವನ್ನು ಪಾವತಿಸಬೇಕಾಗಿದ್ದು, ಮುಂದುವರಿದು ಕಂಕನಾಡಿಯಿಂದ ಸ್ಟೇಟ್ ಬ್ಯಾಂಕ್ ಗೆ ಬಸ್ಸಿನಲ್ಲಿ ಪ್ರಯಾಣಿಸಿದಾಗ ತಗಲುವ ದರ ರೂ. 12.00/- ಆಗುತ್ತದೆ. ಆದ್ದರಿಂದ ಕಂಕನಾಡಿ ಯಿಂದ ಸ್ಟೇಟ್ ಬ್ಯಾಂಕ್ ಗೆ ಬಸ್ಸಿನಲ್ಲಿ ಪ್ರಯಾಣಿಸಲು ಹೆಚ್ಚುವರಿಯಾಗಿ ರೂ.12.00/- ನ್ನು ಪಾವತಿಸಬೇಕಾಗಿರುತ್ತದೆ. ಆಟೋರಿಕ್ಷಾದಲ್ಲಿ ಪ್ರಯಾಣಿಸಿದರೆ ಹೆಚ್ಚುವರಿಯಾಗಿ ರೂ.61.00/- ದರವನ್ನು ಪಾವತಿಸಬೇಕಾಗಿರುತ್ತದೆ.

ಸುರತ್ಕಲ್ ನಿಂದ ಲೇಡಿಹಿಲ್ ಸರ್ಕಲ್ ವರೆಗೆ ಬಸ್ಸಿನಲ್ಲಿ ಪ್ರಯಾಣಿಸಿದಾಗ ರೂ. 23.00/- ದರವನ್ನು ಪಾವತಿಸಬೇಕಾಗಿದ್ದು, ಮುಂದುವರಿದು ಲೇಡಿಹಿಲ್ ಸರ್ಕಲ್ ನಿಂದ ಸ್ಟೇಟ್ ಬ್ಯಾಂಕ್ ಗೆ ಬಸ್ಸಿನಲ್ಲಿ ಪ್ರಯಾಣಿಸಿದಾಗ ತಗಲುವ ದರ ರೂ. 15.00/- ಆಗುತ್ತದೆ. ಆದ್ದರಿಂದ ಲೇಡಿಹಿಲ್ ಸರ್ಕಲ್ ನಿಂದ ಸ್ಟೇಟ್ ಬ್ಯಾಂಕ್ ಗೆ ಬಸ್ಸಿನಲ್ಲಿ ಪ್ರಯಾಣಿಸಲು ಹೆಚ್ಚುವರಿಯಾಗಿ ರೂ.15.00/- ನ್ನು ಪಾವತಿಸಬೇಕಾಗಿರುತ್ತದೆ. ಆಟೋರಿಕ್ಷಾದಲ್ಲಿ ಪ್ರಯಾಣಿಸಿದರೆ ಹೆಚ್ಚುವರಿಯಾಗಿ ರೂ.103.00/- ದರವನ್ನು ಪಾವತಿಸಬೇಕಾಗಿರುತ್ತದೆ.

ಸುರತ್ಕಲ್ ನಿಂದ ಕೊಟ್ಟಾರ ಇನ್‌ಫೋಸಿಸ್ ವರೆಗೆ ಬಸ್ಸಿನಲ್ಲಿ ಪ್ರಯಾಣಿಸಿದಾಗ ರೂ. 20.00/- ದರವನ್ನು ಪಾವತಿಸಬೇಕಾಗಿದ್ದು, ಮುಂದುವರಿದು ಕೊಟ್ಟಾರ ದಿಂದ ಸ್ಟೇಟ್ ಬ್ಯಾಂಕ್ ಗೆ ಬಸ್ಸಿನಲ್ಲಿ ಪ್ರಯಾಣಿಸಿದಾಗ ತಗಲುವ ದರ ರೂ. 16.00/- ಆಗುತ್ತದೆ. ಆದ್ದರಿಂದ ಕೊಟ್ಟಾರ ದಿಂದ ಸ್ಟೇಟ್ ಬ್ಯಾಂಕ್ ಗೆ ಬಸ್ಸಿನಲ್ಲಿ ಪ್ರಯಾಣಿಸಲು ಹೆಚ್ಚುವರಿಯಾಗಿ ರೂ.16.00/- ನ್ನು ಪಾವತಿಸಬೇಕಾಗಿರುತ್ತದೆ. ಆಟೋರಿಕ್ಷಾದಲ್ಲಿ ಪ್ರಯಾಣಿಸಿದರೆ ಹೆಚ್ಚುವರಿಯಾಗಿ ರೂ.124.00/- ದರವನ್ನು ಪಾವತಿಸಬೇಕಾಗಿರುತ್ತದೆ.

**ಟರ್ಮಿನಲ್ ಪಾಯಿಂಟ್ ಪ್ರಕಾರ - ಎಕ್ಸ್ ಪ್ರೆಸ್ ಹಾಗೂ ಷಟಲ್ ಬಸ್ಸಿನ ಹಾಗೂ ಆಟೋರಿಕ್ಷಾ ಪ್ರಯಾಣ ದರ**

| ಟರ್ಮಿನಲ್ ಪಾಯಿಂಟ್ ನಿಂದ | ವರೆಗೆ | ದೂರ (ಕಿ.ಮೀ.) | ನಗರ ಸಾರಿಗೆ ಬಸ್ಸಿನಲ್ಲಿ ಒಬ್ಬ ಪ್ರಯಾಣಿಕರಿಗೆ ಏಕಮುಖ ಸಂಚಾರಕ್ಕೆ ಪ್ರಯಾಣ ದರ (ರೂ.) | ಆಟೋರಿಕ್ಷಾ ಪ್ರಯಾಣ ದರ (ರೂ.) |
|---|---|---|---|---|
| ಮಲ್ಲಿಕಟ್ಟೆ | ನಗರದ ಕೇಂದ್ರ ಭಾಗಗಕ್ಕೆ | 3.5 ಕಿ.ಮೀ. | 12.00/- | 69.00/- |
| ಕಂಕನಾಡಿ | | 3.00 ಕಿ.ಮೀ. | 12.00/- | 61.00/- |
| ಲೇಡಿಹಿಲ್ ಸರ್ಕಲ್ | | 5.5 ಕಿ.ಮೀ. | 12.00/- | 103.00/- |
| ಕೊಟ್ಟಾರ ಇನ್‌ಫೋಸಿಸ್ | | 6.7 ಕಿ.ಮೀ. | 19.00/- | 124.00/- |

ಮೇಲಿನ ಕೋಷ್ಟಕವನ್ನು ಗಮನಿಸಿದಾಗ -ಗುರುಪುರ ಕೈಕಂಬ ದಿಂದ ಮಲ್ಲಿಕಟ್ಟೆ ವರೆಗೆ ಬಸ್ಸಿನಲ್ಲಿ ಪ್ರಯಾಣಿಸಿದಾಗ ರೂ. 25.00/- ದರವನ್ನು ಪಾವತಿಸಬೇಕಾಗಿದ್ದು, ಮುಂದುವರಿದು ಮಲ್ಲಿಕಟ್ಟೆಯಿಂದ ಸ್ಟೇಟ್ ಬ್ಯಾಂಕ್ ಗೆ ಬಸ್ಸಿನಲ್ಲಿ ಪ್ರಯಾಣಿಸಿದಾಗ ತಗಲುವ ದರ ರೂ. 12.00/- ಆಗುತ್ತದೆ. ಆದ್ದರಿಂದ ಮಲ್ಲಿಕಟ್ಟೆ ಯಿಂದ ಸ್ಟೇಟ್ ಬ್ಯಾಂಕ್ ಗೆ ಬಸ್ಸಿನಲ್ಲಿ ಪ್ರಯಾಣಿಸಲು ಹೆಚ್ಚುವರಿಯಾಗಿ ರೂ.12.00/- ನ್ನು ಪಾವತಿಸಬೇಕಾಗಿರುತ್ತದೆ. ಆಟೋರಿಕ್ಷಾದಲ್ಲಿ ಪ್ರಯಾಣಿಸಿದರೆ ಹೆಚ್ಚುವರಿಯಾಗಿ ರೂ.69.00/- ದರವನ್ನು ಪಾವತಿಸಬೇಕಾಗಿರುತ್ತದೆ.

ದೇರಳಕಟ್ಟೆ ಯಿಂದ ಕಂಕನಾಡಿ ವರೆಗೆ ಬಸ್ಸಿನಲ್ಲಿ ಪ್ರಯಾಣಿಸಿದಾಗ ರೂ. 19.00/- ದರವನ್ನು ಪಾವತಿಸಬೇಕಾಗಿದ್ದು, ಮುಂದುವರಿದು ಕಂಕನಾಡಿ ಯಿಂದ ಸ್ಟೇಟ್ ಬ್ಯಾಂಕ್ ಗೆ ಬಸ್ಸಿನಲ್ಲಿ ಪ್ರಯಾಣಿಸಿದಾಗ ತಗಲುವ ದರ ರೂ. 12.00/- ಆಗುತ್ತದೆ. ಆದ್ದರಿಂದ ಕಂಕನಾಡಿ ಯಿಂದ ಸ್ಟೇಟ್ ಬ್ಯಾಂಕ್ ಗೆ ಬಸ್ಸಿನಲ್ಲಿ ಪ್ರಯಾಣಿಸಲು ಹೆಚ್ಚುವರಿಯಾಗಿ ರೂ.12.00/- ನ್ನು ಪಾವತಿಸಬೇಕಾಗಿರುತ್ತದೆ. ಆಟೋರಿಕ್ಷಾದಲ್ಲಿ ಪ್ರಯಾಣಿಸಿದರೆ ಹೆಚ್ಚುವರಿಯಾಗಿ ರೂ.61.00/- ದರವನ್ನು ಪಾವತಿಸಬೇಕಾಗಿರುತ್ತದೆ.

ಸುರತ್ಕಲ್ ನಿಂದ ಲೇಡಿಹಿಲ್ ಸರ್ಕಲ್ ವರೆಗೆ ಬಸ್ಸಿನಲ್ಲಿ ಪ್ರಯಾಣಿಸಿದಾಗ ರೂ. 25.00/- ದರವನ್ನು ಪಾವತಿಸಬೇಕಾಗಿದ್ದು, ಮುಂದುವರಿದು ಲೇಡಿಹಿಲ್ ಸರ್ಕಲ್ ನಿಂದ ಸ್ಟೇಟ್ ಬ್ಯಾಂಕ್ ಗೆ ಬಸ್ಸಿನಲ್ಲಿ ಪ್ರಯಾಣಿಸಿದಾಗ ತಗಲುವ ದರ ರೂ. 12.00/- ಆಗುತ್ತದೆ. ಆದ್ದರಿಂದ ಲೇಡಿಹಿಲ್ ಸರ್ಕಲ್ ನಿಂದ ಸ್ಟೇಟ್ ಬ್ಯಾಂಕ್ ಗೆ ಬಸ್ಸಿನಲ್ಲಿ ಪ್ರಯಾಣಿಸಲು ಹೆಚ್ಚುವರಿಯಾಗಿ ರೂ.12.00/- ನ್ನು ಪಾವತಿಸಬೇಕಾಗಿರುತ್ತದೆ. ಆಟೋರಿಕ್ಷಾದಲ್ಲಿ ಪ್ರಯಾಣಿಸಿದರೆ ಹೆಚ್ಚುವರಿಯಾಗಿ ರೂ.103.00/- ದರವನ್ನು ಪಾವತಿಸಬೇಕಾಗಿರುತ್ತದೆ.

ಸುರತ್ಕಲ್ ನಿಂದ ಕೊಟ್ಟಾರ ಇನ್‌ಫೋಸಿಸ್ ವರೆಗೆ ಬಸ್ಸಿನಲ್ಲಿ ಪ್ರಯಾಣಿಸಿದಾಗ ರೂ. 19.00/- ದರವನ್ನು ಪಾವತಿಸಬೇಕಾಗಿದ್ದು, ಮುಂದುವರಿದು ಕೊಟ್ಟಾರ ಇನ್‌ಫೋಸಿಸ್ ನಿಂದ ಸ್ಟೇಟ್ ಬ್ಯಾಂಕ್ ಗೆ ಬಸ್ಸಿನಲ್ಲಿ ಪ್ರಯಾಣಿಸಿದಾಗ ತಗಲುವ ದರ ರೂ. 19.00/- ಆಗುತ್ತದೆ. ಆದ್ದರಿಂದ ಕೊಟ್ಟಾರ ಇನ್‌ಫೋಸಿಸ್ ನಿಂದ ಸ್ಟೇಟ್ ಬ್ಯಾಂಕ್ ಗೆ ಬಸ್ಸಿನಲ್ಲಿ ಪ್ರಯಾಣಿಸಲು ಹೆಚ್ಚುವರಿಯಾಗಿ ರೂ.19.00/- ನ್ನು ಪಾವತಿಸಬೇಕಾಗಿರುತ್ತದೆ. ಆಟೋರಿಕ್ಷಾದಲ್ಲಿ ಪ್ರಯಾಣಿಸಿದರೆ ಹೆಚ್ಚುವರಿಯಾಗಿ ರೂ.124.00/- ದರವನ್ನು ಪಾವತಿಸಬೇಕಾಗಿರುತ್ತದೆ.

**ಮಂಗಳೂರು ಮಹಾನಗರ ಪಾಲಿಕೆ ಮಂಗಳೂರು ಮಹಾನಗರ ಪಾಲಿಕೆ :** ಆಯುಕ್ತರು, ಮಂಗಳೂರು ಮಹಾನಗರ ಪಾಲಿಕೆ , ಮಂಗಳೂರು ರವರ ಪತ್ರ ಸಂ:ಮ.ನ.ಪಾ/ಸಾ/ಸಿ.ಆರ್.5/2025-26 ದಿನಾಂಕ;29-11-2025 ರಲ್ಲಿ1991 ರ ರಾಷ್ಟ್ರೀಯ ಜನಗಣತಿಯ ಆಧಾರದಲ್ಲಿ ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ನಗರ ಜನಸಂಖ್ಯೆ: 273304 ಎಂದಾಗಿರುತ್ತದೆ. 2011 ರ ರಾಷ್ಟ್ರೀಯ ಜನಗಣತಿಯ ಆಧಾರದಲ್ಲಿ ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ನಗರ ಜನಸಂಖ್ಯೆ:488968 ಎಂದಾಗಿರುತ್ತದೆ ನಂತರ 2021 ರಲ್ಲಿ ಪೂರ್ಣಗೊಳ್ಳಬೇಕಾಗಿದ್ದ ಜನಗಣತಿ ಕಾರಣಾಂತರಗಳಿಂದ ಮುಂದೂಡಲಾಗಿದ್ದು, ಅಧಿಕೃತ ಜನಸಂಖ್ಯೆ ಲಭ್ಯವಾಗಿರುವುದಿಲ್ಲ. 2025 ನೇ ಇಸವಿಗೆ ಅಂದಾಜಿಸಲಾದಂತೆ, ಮಂಗಳೂರು ನಗರದ ಜನಸಂಖ್ಯೆ: 5,97,824 ಇರುವುದಾಗಿ ಪತ್ರ ಮುಖೇನ ವರದಿ ನೀಡಿರುತ್ತಾರೆ.

| ಕ್ರಮ ಸಂ | ಪುರುಷರ ಸಂಖ್ಯೆ | ಮಹಿಳೆಯರ ಸಂಖ್ಯೆ | ಒಟ್ಟು |
|---|---|---|---|
| 1991 ರ ರಾಷ್ಟ್ರೀಯ ಜನಗಣತಿಯ ಪ್ರಕಾರ | 135857 | 137447 | 273304 |
| 2011 ರ ರಾಷ್ಟ್ರೀಯ ಜನಗಣತಿಯ ಪ್ರಕಾರ | 242512 | 246456 | 488968 |

**<u>ಶಿಕ್ಷಣ ಇಲಾಖೆ:</u>**

ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಶಿಕ್ಷಣ ಇಲಾಖೆಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳಲ್ಲಿ, ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳಲ್ಲಿ ಹಾಗೂ ಕಾಲೇಜುಗಳಲ್ಲಿ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ ಒಟ್ಟು 1,24,502 ವಿದ್ಯಾರ್ಥಿಗಳು ವಿದ್ಯಾಬ್ಯಾಸ ಮಾಡುತ್ತಿರುತ್ತಾರೆ. ಸದರಿಯವರಿಗೆ ದೈನಂದಿನ

ಪ್ರಯಾಣಕ್ಕಾಗಿ ರಿಯಾಯಿತಿ ದರದಲ್ಲಿ ವಾರ್ಷಿಕ ಪಾಸುಗಳು ಹಾಗೂ ಸೂಕ್ತ ಸಾರಿಗೆ ವ್ಯವಸ್ಥೆಯನ್ನು ಒದಗಿಸಬೇಕಾಗಿರುತ್ತದೆ.

| **ವಿಷಯ** | **ಪ್ರಾಥಮಿಕ ಮತ್ತು ಪ್ರೌಡ ಶಿಕ್ಷಣ ಸಂಸ್ಥೆಗಳು ಹಾಗೂ ಸದ್ರಿಸಂಸ್ಥೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ** | | **ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳು ಹಾಗೂ ಸದ್ರಿ ಸಂಸ್ಥೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ** | | **ಕಾಲೇಜಗಳು ಸಂಸ್ಥೆಗಳು ಹಾಗೂ ಸದ್ರಿ ಸಂಸ್ಥೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ** | |
|---|---|---|---|---|---|---|
| ಪ್ರಸ್ತುತ 2025 ರ ವರೆಗೆ ವಿದ್ಯಾರ್ಥಿಗಳ ಸಂಖ್ಯೆ | **ಜಿಲ್ಲಾ ವ್ಯಾಪ್ತಿ** | **ಮಹಾನಗರ ಪಾಲಿಕೆ ವ್ಯಾಪ್ತಿ** | **ಜಿಲ್ಲಾ ವ್ಯಾಪ್ತಿ** | **ಮಹಾನಗರ ಪಾಲಿಕೆ ವ್ಯಾಪ್ತಿ** | **ಜಿಲ್ಲಾ ವ್ಯಾಪ್ತಿ** | **ಮಹಾನಗರ ಪಾಲಿಕೆ ವ್ಯಾಪ್ತಿ** |
| | 3,26,377 | 75,951 | 74,858 | 30,593 | 40,628 | 17,958 |

**<u>ಆರೋಗ್ಯ ಇಲಾಖೆ:</u>** ಮಂಗಳೂರು ನಗರದ ಕೇಂದ್ರ ಭಾಗದಲ್ಲಿ ಸಾರ್ವಜನಿಕ ಸರಕಾರಿ ಆಸ್ಪತ್ರೆಗಳಾದ ಲೇಡಿಗೋಷನ್ ಮತ್ತು ವೆನ್‌ಲಾಕ್ ಆಸ್ಪತ್ರೆಗೆ ಪ್ರತಿನಿತ್ಯ ದಾಖಲಾಗುತ್ತಿರುವ ರೋಗಿಗಳ ಸಂಖ್ಯೆ ಹಾಗೂ ಸದರಿ ಆಸ್ಪತ್ರೆಗಳಿಗೆ ಭೇಟಿನೀಡುತ್ತಿರುವ ಸಂಖ್ಯೆ ಈ ಕೆಳಗಿನಂತಿದೆ.

| **ವಿಷಯ** | **ಮಹಿಳೆಯರ ಸಂಖ್ಯೆ (ಅಂದಾಜು)** | | | **ಒಟ್ಟು** |
|---|---|---|---|---|
| ಪ್ರಸ್ತುತ ಲೇಡಿಗೋಶನ್ ಆಸ್ಪತ್ರೆಗೆ ಪ್ರತಿನಿತ್ಯ ದಾಖಲಾಗುತ್ತಿರುವ ರೋಗಿಗಳ ಸಂಖ್ಯೆ ಹಾಗೂ ಸಂಬಂಧಿಕರ, ಸಂದರ್ಶಕರ ಸಂಖ್ಯೆ | • ಹೊರ ರೋಗಿಗಳು-260<br>• ಹೊರ ರೋಗಿಗಳ ಸಂಬಂಧಿಕರು (ಪುರುಷರನ್ನು ಒಳಗೊಂಡು)-300<br>• ಒಳರೋಗಿಗಳು(ಮಹಿಳೆಯರು)-310<br>• ನವಜಾತ ಶಿಶುಗಳು-102<br>• ಒಳರೋಗಿಗಳ ಒಡನಾಡಿಗಳ ಸಂದರ್ಶಕರ ಸಮೇತ-750<br>ಆಸ್ಪತ್ರೆ ಸಿಬ್ಬಂದಿಗಳು-282 | | | **2004** |
| ಪ್ರಸ್ತುತ ವೆನ್ಲಾಕ್ ಆಸ್ಪತ್ರೆಗೆ ಪ್ರತಿನಿತ್ಯ | **ಪುರುಷರ ಸಂಖ್ಯೆ(ಅಂದಾಜು)** | **ಮಹಿಳೆಯರ ಸಂಖ್ಯೆ(ಅಂದಾಜು)** | **ಮಕ್ಕಳು(ಅಂದಾಜು)** | **ಒಟ್ಟು** |
| ದಾಖಲಾಗುತ್ತಿರುವ ರೋಗಿಗಳ ಸಂಖ್ಯೆ ಹಾಗೂ | • ಹೊರ ರೋಗಿಗಳು-503<br>• ಒಳರೋಗಿಗಳು-62 | • ಹೊರ ರೋಗಿಗಳು-333<br>• ಒಳರೋಗಿಗಳು-32 | • 108 | **930** |
| ಸಂಬಂಧಿಕರ, ಸಂದರ್ಶಕರ ಸಂಖ್ಯೆ | **ಒಟ್ಟು** | | | **2934** |

- ರೋಗಿಗಳು ಸಂಬಂಧಿಕರು ಒಂದು ಹೊರರೋಗಿಗೆ ಇಬ್ಬರಂತೆ ಸುಮಾರು - 1400 ರಿಂದ 1600 (ರೋಗಿಗಳ ಸಂಬಂಧಿಕರ ವಿವರಗಳನ್ನು ಪಡೆದುಕೊಳ್ಳಲಾಗುವುದಿಲ್ಲ)
- ರೋಗಿಗಳು ಸಂಬಂಧಿಕರು ಒಂದು ಒಳರೋಗಿಗೆ ಇಬ್ಬರಂತೆ ಸುಮಾರು - 145 ರಿಂದ 150 (ರೋಗಿಗಳ ಸಂಬಂಧಿಕರ ವಿವರಗಳನ್ನು ಪಡೆದುಕೊಳ್ಳಲಾಗುವುದಿಲ್ಲ)
- ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರು ಮತ್ತು ಸಿಬ್ಬಂದಿಗಳು - 1127 (ಸರ್ಕಾರಿ-194, ಎನ್‌ಹೆಚ್‌ಎಂ-101, ಕೆ.ಎಂ.ಸಿ.-601, ಹೊರಗುತ್ತಿಗೆ ಗ್ರೂಪ್-195, ಹೊರಗುತ್ತಿಗೆ (ಎಆರೆಸ್) – 36)

**ರೈಲ್ವೇ ಇಲಾಖೆ:**

ಮಂಗಳೂರು ಕೇಂದ್ರ ರೇಲ್ವೇ ನಿಲ್ದಾಣಕ್ಕೆ ಹಾಗೂ ಮಂಗಳೂರು ಜಂಕ್ಷನ್ ರೇಲ್ವೇ ನಿಲ್ದಾಣಕ್ಕೆ ಪ್ರತಿದಿನ ಆಗಮಿಸುವ ರೈಲುಗಳ ಸಂಖ್ಯೆ ಹಾಗೂ ಪ್ರಯಾಣಿಕರ ಸಂಖ್ಯೆ ಈ ಕೆಳಗಿನಂತಿದೆ:

| ವಿಷಯ | ಮಂಗಳೂರು ಕೇಂದ್ರ ರೇಲ್ವೇ ನಿಲ್ದಾಣಕ್ಕೆ ಪ್ರತಿದಿನ ಆಗಮಿಸುವ ರೈಲುಗಳ ಸಂಖ್ಯೆ ಹಾಗೂ ಪ್ರಯಾಣಿಕರ ಸಂಖ್ಯೆ | | ಮಂಗಳೂರು ಕೇಂದ್ರ ರೇಲ್ವೇನಿಲ್ದಾಣದಿಂದ ಪ್ರತಿದಿನ ಹೊರಡುವ ರೈಲುಗಳ ಸಂಖ್ಯೆ ಹಾಗೂ ಪ್ರಯಾಣಿಕರ ಸಂಖ್ಯೆ | ಮಂಗಳೂರು ಜಂಕ್ಷನ್ ರೇಲ್ವೇ ನಿಲ್ದಾಣಕ್ಕೆ ಪ್ರತಿದಿನ ಆಗಮಿಸುವ ರೈಲುಗಳ ಸಂಖ್ಯೆ ಹಾಗೂ ಪ್ರಯಾಣಿಕರ ಸಂಖ್ಯೆ | | ಮಂಗಳೂರು ಜಂಕ್ಷನ್ ರೇಲ್ವೇ ನಿಲ್ದಾಣದಿಂದ ಪ್ರತಿದಿನ ಹೊರಡುವ ರೈಲುಗಳ ಸಂಖ್ಯೆ ಹಾಗೂ ಪ್ರಯಾಣಿಕರ ಸಂಖ್ಯೆ |
|---|---|---|---|---|---|---|
| ಪ್ರಸ್ತುತ 2025 ವರ್ಷದ ಮಾಹಿತಿ | Average 15117 passengers | | | Average 3348 passengers | | |
| | Daily Trains | 24 | | Daily Trains | 12 | |
| | Weekly Trains | 4 | | Weekly Trains | 20 | |
| | Bi-Weekly Trains | 1 | | Bi-Weekly Trains | 8 | |
| | 6 days in a week | 3 | | 6 days in a week | 1 | |
| | **Total** | **32** | | **Total** | **41** | |

**ಪೊಲೀಸ್ ಇಲಾಖೆ:**

ಪೊಲೀಸ್ ಆಯುಕ್ತರು ಮಂಗಳೂರು ರವರು ದಿನಾಂಕ:26-11-2025 ರ ಪತ್ರದಲ್ಲಿ, ಮಂಗಳೂರು ನಗರದ ಸ್ಟೇಟ್‌ಬ್ಯಾಂಕ್ ಬಸ್ಸು ನಿಲ್ದಾಣವನ್ನು ಸುತ್ತಮುತ್ತಲಿನಲ್ಲಿರುವ ವಿವಿಧ ಇಲಾಖೆಯ ಸರ್ಕಾರಿ ಇಲಾಖೆಯ ಕಟ್ಟಡಗಳು, ಕೇಂದ್ರ ಮಾರುಕಟ್ಟೆ, ಮೀನಿನ ಮಾರ್ಕೆಟ್, ನಗರದ ಪ್ರತಿಷ್ಠಿತ ಮಾಲ್ ಗಳು, ವಾಣಿಜ್ಯ ಸಂಕೀರ್ಣಗಳು, ವ್ಯಾಪಾರ ಕೇಂದ್ರಗಳು, ಸರ್ಕಾರಿ ಆಸ್ಪತ್ರೆಗಳಿಗೆ ಬರುವ ಹಾಗೂ ಹೋಗುವ ಸಾರ್ವಜನಿಕರು ಉಪಯೋಗಿಸುತ್ತಿರುವುದಾಗಿದೆ. ಈ ಪ್ರದೇಶವು ಗರಿಷ್ಠವಾಗಿ ಎಲ್ಲಾ ಸೌಲಭ್ಯವನ್ನು ಹೊಂದಿರುವ ನಗರದ ಕೇಂದ್ರೀಕೃತ ಪ್ರದೇಶವಾಗಿರುವುದರಿಂದ ಜಿಲ್ಲೆಯ ವಿವಿಧ ಭಾಗಗಳಿಂದ ಹಾಗೂ ಹೊರ ಜಿಲ್ಲೆ/ರಾಜ್ಯಗಳಿಂದ ಸಾರ್ವಜನಿಕರು ಈ ಪ್ರದೇಶವನ್ನು ಅವಲಂಬಿಸಿರುತ್ತಾರೆ.

ಸಾರ್ವಜನಿಕರು ಸಾರ್ವಜನಿಕರ ಸಾರಿಗೆ ಬಸ್ಸುಗಳ ಬದಲಾಗಿ ತಮ್ಮ ಸ್ವಂತ ಖಾಸಗಿ ವಾಹನಗಳನ್ನು ಉಪಯೋಗಿಸಲು ಒಲವನ್ನು ತೋರುತ್ತಿರುವುದಾಗಿದೆ. ಇದರಿಂದ ನಗರದ ಒಳಭಾಗದಲ್ಲಿ ಪೀಕ್ ಅವರ್ಸ್‌ಗಳಲ್ಲಿ ನಗರದ ಪ್ರಮುಖ ರಸ್ತೆ ಮತ್ತು ಜಂಕ್ಷನ್ ಗಳಲ್ಲಿ ವಿಪರೀತ ಸಂಚಾರ ದಟ್ಟಣೆ ಉಂಟಾಗುತ್ತಿರುವುದಾಗಿದೆ.

ಸಾಮಾನ್ಯವಾಗಿ ಪ್ರಸ್ತುತ ಸಾರ್ವಜನಿಕರ ಸಾರಿಗೆ ವಾಹನವನ್ನು ಅವಲೋಕಿಸಿದಲ್ಲಿ ನಗರದ ಒಳಭಾಗ ಸಂಚಾರ ದಟ್ಟಣೆ ಹೆಚ್ಚುತ್ತಿದ್ದು, ಸಾರ್ವಜನಿಕರು ಪ್ರಯಾಣಿಸಲು ಸಾರಿಗೆ ಇಲಾಖೆಯ ಬಸ್ಸುಗಳನ್ನು ಹೆಚ್ಚಿಸಿದಲ್ಲಿ, ಹಾಲಿ ಉಪಯೋಗಿಸುತ್ತಿರುವ ಕಾರು ಮತ್ತು ದ್ವಿ-ಚಕ್ರ ವಾಹನಗಳ ಉಪಯೋಗಿಸದೇ ಸದ್ರಿ ಸಾರಿಗೆ ಬಸ್ಸುಗಳನ್ನು ಪ್ರಯಾಣಿಸಿದಾಗ ಸಂಚಾರ ದಟ್ಟಣೆ ಕಡಿಮೆಯಾಗುತ್ತದೆ ಮತ್ತು ಅನುಕೂಲವಾಗುತ್ತದೆ.

ಪ್ರಸ್ತುತ ಚಾಲ್ತಿಯಲ್ಲಿರುವ ಮಾನ್ಯ ಜಿಲ್ಲಾಧಿಕಾರಿಯವರ ಅಧಿಸೂಚನೆಯಂತೆ ಹೆಚ್ಚುವರಿ ಬಸ್ಸುಗಳು ನಗರಕ್ಕೆ ಬರುವುದನ್ನು ನಿರ್ಬಂಧಿಸಿದಂತಾಗಿರುವುದರಿಂದ ಜನಸಂಖ್ಯೆಯಲ್ಲಿ ಏರಿಕೆಯಾಗಿದ್ದರೂ, ನಗರದ ಒಳಗಡೆ ಬರುವ ಬಸ್ಸುಗಳು ಅದೇ ಆಗಿದ್ದು, ಸಾರ್ವಜನಿಕರ ಬೇಡಿಕೆಯ ಅನುಗುಣವಾಗಿ ಬಸ್ಸುಗಳ ಅಭಾವವಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

ಸಾಮಾನ್ಯವಾಗಿ ಸಾರ್ವಜನಿಕ ಸಾರಿಗೆ ಬಸ್ಸುಗಳಲ್ಲಿ ಒಂದು ಬಾರಿಗೆ 35 ರಿಂದ 50 ಪ್ರಯಾಣಿಕರು ಪ್ರಯಾಣಿಸುವುದರಿಂದ ಸಾರ್ವಜನಿಕರು ತಮ್ಮ ದೈನಂದಿನ ಕೆಲಸ ಕಾರ್ಯಗಳಿಗೆ ಬಳಕೆಯ ವಾಹನಗಳಾದ 8

ರಿಂದ 12 ಮೋಟಾರು ಕಾರು, ದ್ವಿ-ಚಕ್ರ ವಾಹನಗಳ ಸಂಚಾರವನ್ನು ಕಡಿಮೆಗೊಳಿಸಬಹುದು. ದ್ವಿ-ಚಕ್ರ ವಾಹನ ದಟ್ಟಣೆಯನ್ನು ಕಡಿಮೆಗೊಳಿಸಲು ಅನುಕೂಲವಾಗುತ್ತದೆ. ಅದೇ ರೀತಿ ನಗರದಲ್ಲಿ ಉದ್ಭವಿಸುವ ವಾಹನ ಪಾರ್ಕಿಂಗ್ ಸಮಸ್ಯೆಯನ್ನು ಪರಿಹರಿಸಬಹುದಾಗಿದೆ.

ಆದುದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ಸಾರ್ವಜನಿಕರ ಬೇಡಿಕೆಯ ಅನುಗುಣವಾಗಿ ಸಾರ್ವಜನಿಕ ಸಾರಿಗೆ ಬಸ್ಸುಗಳು ನಗರದ ಒಳಗಡೆ ಪ್ರವೇಶಿಸಲು ಅನುವು ಮಾಡಿಕೊಡುವುದರಿಂದ ನಗರದ ಒಳಭಾಗದಲ್ಲಿ ಸಂಚಾರ ದಟ್ಟಣೆಯನ್ನು ಕಡಿಮೆಗೊಳಿಸುವ ಸಾಧ್ಯತೆಗಳಿರುವುದಾಗಿ ವರದಿಯನ್ನು ಸಲ್ಲಿಸಿರುತ್ತಾರೆ.

**ಜಿಲ್ಲಾ ಪಂಚಾಯತ್ ದಕ್ಷಿಣ ಕನ್ನಡ :**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ದ.ಕ. ಜಿಲ್ಲೆ ರವರ ಪತ್ರ ಸಂಖ್ಯೆ.ದಕಜಿಪಂ/ಯೋ/ಸಸಾಲ/ಸಿಆರ್/2018-19(ಪಿ1) ರಲ್ಲಿ ದಿನಾಂಕ :10-09-2025 ರಂದು ನಡೆದ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಯ ಪ್ರಗತಿ ಪರಿಶೀಲನಾ ಸಭೆಯ ನಡವಳಿಯಲ್ಲಿ ಉಲ್ಲೇಖಿಸಿದಂತೆ ಪಂಚ ಗ್ಯಾರಂಟಿ ಯೋಜನೆಯಲ್ಲಿ ಒಂದಾದ ಶಕ್ತಿ ಯೋಜನೆಯಡಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ಸುಗಳನ್ನು ಮಂಗಳೂರು ನಗರ ಪ್ರದೇಶಗಳ ವ್ಯಾಪ್ತಿಯಲ್ಲಿ ಚಲಾಯಿಸಲು ಬಹು ಬೇಡಿಕೆಯಿದ್ದು, ಬಸ್ಸುಗಳಿಗೆ ಪರವಾನಿಗೆಯನ್ನು ನೀಡಲು ಜಿಲ್ಲಾದಂಡಾಧಿಕಾರಿಯವರ ಅಧಿಸೂಚನೆ ಅಡ್ಡಿಯಾಗಿದ್ದು ಸದರಿ ಅಧಿಸೂಚನೆಯಿಂದ ಕ.ರಾ.ಸಾನಿಗಮದ ಪರವಾನಿಗೆ ವಿನಾಯತಿ ನೀಡಲು ಕೋರಿರುತ್ತಾರೆ. ಸದರಿ ಅಧಿಸೂಚನೆಯಿಂದ ವಿನಾಯಿತಿ ನೀಡಿದರೆ ಮಂಗಳೂರು ಕೇಂದ್ರ ಭಾಗದಿಂದ ಬಸ್ಸುಗಳ ಸಂಚಾರವನ್ನು ಪ್ರಾರಂ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಪ್ರಯಾಣಿಕರಿಗೆ ಶಕ್ತಿ ಯೋಜನೆಯ ಸದುಪಯೋಗ ಪಡೆದುಕೊಳ್ಳುವಂತೆ ಮಾಡಬಹುದಾಗಿರುತ್ತದೆ ಎಂದು ಬೇಡಿಕೆಯನ್ನು ಸಲ್ಲಿಸಿರುತ್ತಾರೆ.

**ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆ ಮಂಗಳೂರು ವಿಭಾಗ ಮಂಗಳೂರು:**

ಮಂಗಳೂರು ನಗರದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು, ಕೇಂದ್ರ ರೈಲ್ವೇ ನಿಲ್ದಾಣ ಮತ್ತು ವಿಶ್ವವಿದ್ಯಾಲಯ, ಖಾಸಗಿ –ಸರ್ಕಾರಿ ಶಿಕ್ಷಣ ಸಂಸ್ಥೆಗಳಿದ್ದು ಸದರಿ ಸಂಸ್ಥೆಗಳಿಗೆ ವಿದ್ಯಾರ್ಥಿಗಳು, ರೋಗಿಗಳು, ರೋಗಿಗಳ ಕುಟುಂಬಸ್ಥರು , ರೈಲ್ವೇ ಅವಲಂಬಿತ ಪ್ರಯಾಣಿಕರು, ಸರ್ಕಾರಿ ಇಲಾಖೆಗಳಾದ ಪೊಲೀಸ್ ಆಯುಕ್ತರ ಕಚೇರಿ, ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ, ಪ್ರಾದೇಶಿಕ ಸಾರಿಗೆ ಕಚೇರಿ, ಬ್ಯಾಂಕ್ ಗಳು, ವಾಣಿಜ್ಯ ತೆರಿಗೆ ಕಚೇರಿ, ಲೋಕೋಪಯೋಗಿ ಇಲಾಖೆ, ಅರಣ್ಯ ಇಲಾಖೆ, ಆರೋಗ್ಯ ಇಲಾಖೆ, ತಾಲೂಕು ಪಂಚಾಯತಿ, ತಹಶೀಲ್ದಾರರ ಕಚೇರಿ, ಕೃಷಿ ಇಲಾಖೆ, ಶಿಕ್ಷಣಾಧಿಕಾರಿಗಳ ಕಚೇರಿ ಗಳಿಗೆ ದಿನನಿತ್ಯದ ಇತರೆ ಕೆಲಸ ಕಾರ್ಯಗಳಿಗೆ ಸಾವಿರಾರು ಜನರು ಬಂದು ಹೋಗುತ್ತಿದ್ದು ಸದರಿಯವರು ಕೆ.ಎಸ್. ಆರ್.ಟಿ.ಸಿ. ಯ ವಿಭಾಗೀಯ ನಿಯಂತ್ರಣಾಧಿಕಾರಿಯವರಿಗೆ ಹಾಗೂ ಮಾನ್ಯ ಜಿಲ್ಲಾಧಿಕಾರಿಯವರಿಗೆ ಹಲವಾರು ಮನವಿಗಳನ್ನು ಸಲ್ಲಿಸಿದ್ದು ಸದರಿ ಮನವಿಗಳು ಈ ಕೆಳಗಿನಂತಿವೆ.

**ಮಂಗಳೂರು ನಗರದಲ್ಲಿ ಸಾರಿಗೆ ಕಾರ್ಯಾಚರಣೆ ಮಾಡಲು ಕೋರಿ ಬಂದಿರುವ ಮನವಿಗಳು.**

| ಕ್ರಮ ಸಂಖ್ಯೆ | ಮನವಿದಾರರ ವಿವರ | ಮನವಿ ದಿನಾಂಕ | ವಿಷಯಗಳು |
|---|---|---|---|
| 1. | ಶ್ರೀ. ಯು.ಟಿ.ಖಾದರ್ ಫರೀದ್, ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ. | 14-06-2023 | ಮಂಗಳೂರು ನಗರದಿಂದ ಉಳ್ಳಾಲ ತಾಲ್ಲೂಕಿನ ಕೊಣಾಜೆ ಗ್ರಾಮಕ್ಕೆ ಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆಗೊಳಿಸುವ ಬಗ್ಗೆ. |
| 2. | ಡಾ.ಭರತ್ ಶೆಟ್ಟಿ ವೈ , ಮಾನ್ಯ ಶಾಸಕರು ಮಂಗಳೂರು ನಗರ ಉತ್ತರ ವಿಧಾನಸಭಾ ಕ್ಷೇತ್ರ | 16-06-2023 | ಮಂಗಳೂರಿನಿಂದ ಕಾಟಿಪಳ್ಳಕ್ಕೆ ಕೆ.ಎಸ್.ಆರ್.ಟಿ.ಸಿ. ನರ್ಮ್ ಬಸ್ಸು ಸಂಚಾರ ಕಲ್ಪಿಸುವ ಬಗ್ಗೆ. 1. ಸ್ಟೇಟ್ ಬ್ಯಾಂಕ್-ಲಾಲ್ ಬಾಗ್-ಪಣಂಬೂರು- ಸುರತ್ಕಲ್- ಕಾನ- ಬಾಳ-ಕಾಟಿಪಳ್ಳ. 2. ಸ್ಟೇಟ್ ಬ್ಯಾಂಕ್-ಲಾಲ್ ಬಾಗ್ –ಕುಳಾಯಿ-ಹೊನ್ನಕಟ್ಟೆ-ಬಾಳ –ಕೈಕಂಬ, 3. ಸ್ಟೇಟ್ಬ್ಯಾಂಕ್-ಲಾಲ್ಬಾಗ್ –ಕುಳಾಯಿ-ಹೊನ್ನಕಟ್ಟೆ-ಬಾಳ –ಕೈಕಂಬ, |
| 3. | ಕೋಡಿಕಲ್ ಪ್ರದೇಶದ ನಾಗರಿಕರ ಪರವಾಗಿ ಶ್ರೀ.ಪಾಂಡುರಂಗ ಕುಕ್ಯಾನ್ ಮತ್ತು ಇತರರು | 20-06-2023 | ಕೋಡಿಕಲ್ ಪ್ರದೇಶಕ್ಕೆ ಮಂಗಳೂರಿನಿಂದ ಸರ್ಕಾರಿ ಬಸ್ಸು ಸೇವೆ ಒದಗಿಸುವ ಬಗ್ಗೆ. |
| 4. | ಶ್ರೀ. ಚಂದ್ರಹಾಸ ಪೂಜಾರಿ ಹಾಗೂ ಪಾಂಡುರಂಗ ಕುಕ್ಯಾನ್, ಮಂಗಳೂರು ಮತ್ತು ಕೋಡಿಕಲ್ ಪ್ರದೇಶದ ನಿವಾಸಿಗಳು | 28-06-2023 | ಮಂಗಳೂರು ಕೋಡಿಕಲ್ ಪ್ರದೇಶದಲ್ಲಿ ವಾಸಿಸುವ ನಿವಾಸಿಗಳಿಂದ ಖಾಸಗಿ ಸಿಟಿ ಬಸ್ ಒದಗಿಸುವ ಬಗ್ಗೆ. (ಕೋಡಿಕಲ್-ಕಾಟಿಪಳ್ಳ –ಕೋಡಿಕಲ್-ಬೊಂದೇಲ್- ಪಡೀಲ್) |
| 5. | ಕೋಡಿಕಲ್ ಪ್ರದೇಶದ ಸಾರ್ವಜನಿಕರು | 31-07-2023 | ಕೋಡಿಕಲ್ ಪ್ರದೇಶಕ್ಕೆ ಮಂಗಳೂರಿನಿಂದ ಸರಕಾರಿ ಸಿಟಿ ಬಸ್ಸು ಒದಗಿಸುವ ಬಗ್ಗೆ. |

| | | | |
|---|---|---|---|
| 6. | ಶ್ರೀ. ಪುರುಷೋತ್ತಮ ಚಿತ್ರಾಪುರ, ಬ್ಲಾಕ್ ಕಾಂಗ್ರೆಸ್ ಸಮಿತಿ ಸುರತ್ಕಲ್ | 12-09-2023 | ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಕೋಡಿಕಲ್ ಪ್ರದೇಶದ ಮಂಗಳೂರು ಸರಕಾರಿ ಸಿಟಿ ಬಸ್ಸು ಒದಗಿಸುವ ಬಗ್ಗೆ ಮನವಿ. |
| 7. | ಮಾನ್ಯ ಶ್ರೀ.ಡಿ.ಕೆ. ಶಿವಕುಮಾರ್, ಸನ್ಮಾನ್ಯ ಉಪಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರ ವಿಧಾನ ಸೌಧ, ಬೆಂಗಳೂರು | 12-09-2023 | ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಕೋಡಿಕಲ್ ಪ್ರದೇಶಕ್ಕೆ ಮಂಗಳೂರಿನಿಂದ ಸರಕಾರಿ ಸಿಟಿ (ನರ್ಮ್) ಬಸ್ಸು ಸೇವೆ ಒದಗಿಸಲು ಮನವಿ. |
| 8. | ಅಧ್ಯಕ್ಷರು ಮತ್ತು ಕಾರ್ಯದರ್ಶಿ, ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ ಹರೇಕಳ ಗ್ರಾಮ ಸಮಿತಿ | 22-09-2023 | ಹರೇಕಳದಿಂದ ಸ್ಟೇಟ್ ಬ್ಯಾಂಕ್ ನಡುವೆ ಕೆ.ಎಸ್.ಆರ್.ಟಿ.ಸಿ. ನರ್ಮ್ ನಿರಂತರ ಓಡಾಡುವಂತೆ ಕ್ರಮಕೈಗೊಳ್ಳಲು ಹಾಗೂ ಹೆಚ್ಚುವರಿ ಬಸ್ ಒದಗಿಸಲು ಒತ್ತಾಯಿಸಿ. |
| 9. | ಶ್ರೀ. ಭರತ್ ಕುಮಾರ್ ,ಮಾನ್ಯ ಪ್ರಧಾನ ಕಾರ್ಯದರ್ಶಿ ಯುವಕ ಮಂಡಲ ಕಾಟಿಪಳ್ಳ, ಕೃಷ್ಣಾಪುರ. | 28-07-2023 | ಳು ಸ್ಟೇಟ್ ಬ್ಯಾಂಕ್-ಕಾರ್ ಸ್ಟ್ರೀಟ್ –ಲೇಡಿಹಿಲ್ –ಸುರತ್ಕಲ್ – ಚೊಕ್ಕಬೆಟ್ಟು-ಕೃಷ್ಣಾ ರ-ಗಣೇಶಪುರ ಮಾರ್ಗವಾಗಿ 02 ಹೆಚ್ಚುವರಿ ಬಸ್ಸುಗಳು.<br>2. ಮಂಗಳಾದೇವಿ-ಕಂಕನಾಡಿ-ಲಾಲ್ ಬಾಗ್ –ಸುರತ್ಕಲ್ –ಕಾನ-ಬಾಳ- ಗಣೇಶಪುರ- ಕೃಷ್ಣಾ ರ ಮಾರ್ಗವಾಗಿ 02 ಹೆಚ್ಚುವರಿ ಬಸ್ಸುಗಳು.<br>3. ಗಣೇಶಪುರ- ಕಾನ-ಬಾಳ- ಸುರತ್ಕಲ್ –ಕೊಟ್ಟಾರ-ಜ್ಯೋತಿ-ಹಂಪನಕಟ್ಟೆ-ಸ್ಟೇಟ್ ಬ್ಯಾಂಕ್ ಮಾರ್ಗವಾಗಿ 02 ಹೆಚ್ಚುವರಿ ಬಸ್ ಗಳು,<br>ಗ ಗಣೇಶಪುರ- ಸುರತ್ಕಲ್- ಕಾವೂರು-ಪಿಲಿಕುಳ-ನೂತನ ಮಾರ್ಗವಾಗಿ 02 ಹೆಚ್ಚುವರಿ ಬಸ್ ಗಳು |
| 10. | ಶ್ರೀ. ಪುರುಷೋತ್ತಮ ಚಿತ್ರಾಪುರ, ಬ್ಲಾಕ್ ಕಾಂಗ್ರೆಸ್ ಸಮಿತಿ ಸುರತ್ಕಲ್ | 01-08-2023 | 1. ಸ್ಟೇಟ್ ಬ್ಯಾಂಕ್, ಕಾರ್ ಸ್ಟ್ರೀಟ್ ,ಲೇಡಿಹಿಲ್, ಸುರತ್ಕಲ್ , ಹೊಸಬೆಟ್ಟು , ಕೃಷ್ಣಾಪುರ, ಗಣೇಶಪುರ ಮಾರ್ಗವಾಗಿ ಎರಡು ಹೆಚ್ಚುವರಿ ಬಸ್ಸುಗಳು.<br>2. ಮಂಗಳಾದೇವಿ, ಕಂಕನಾಡಿ, ಲಾಲ್ ಬಾಗ್, ಸುರತ್ಕಲ್, ಕಾನ, ಬಾಳ, ಗಣೇಶಪುರ, ಕೃಷ್ಣಾಪುರ ಮಾರ್ಗವಾಗಿ ಎರಡು ಹೆಚ್ಚುವರಿ ಬಸ್ಸುಗಳು.<br>3. ಗಣೇಶಪುರ, ಕಾನ, ಬಾಳ, ಸುರತ್ಕಲ್ , ಕೊಟ್ಟಾರ, ಜ್ಯೋತಿ, ಹಂಪನಕಟ್ಟೆ, ಸ್ಟೇಟ್ ಬ್ಯಾಂಕ್ ಮಾರ್ಗವಾಗಿ ಎರಡು ಹೆಚ್ಚುವರಿ ಬಸ್ಸುಗಳು.<br>4. ಗಣೇಶಪುರ- ಸುರತ್ಕಲ್- ಕಾವೂ -ಪಿಲಿಕುಳಕ್ಕೆ ನೂತನ ಮಾರ್ಗವಾಗಿ ಎರಡು ಬಸ್ಸುಗಳು. |
| 11. | ಸಾರ್ವಜನಿಕರ ಪರವಾಗಿ | 27-10-2023 | ಮಂಗಳೂರು ನಗರ ಉತ್ತರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸುವ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ನಗರ ಉತ್ತರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಮಂಗಳೂರು ನಗರದಿಂದ ಕಾಟಿಪಳ್ಳ/ಮಲ್ಲೂರು/ಅದ್ಯಪಾಡಿ/ನೂಯಿ ಪೊಳಲಿ/ ಗಣೇಶಪುರ/ ಆಕಾಶ ಭವನಕ್ಕೆ ಹಾಗೂ ಮಂಗಳಾದೇವಿ ಕೃಷ್ಣಾಪುರ ಮಾರ್ಗದಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸುವಂತೆ ಕೋರಿರುವ ಬಗ್ಗೆ ಮನವಿ. |
| 12. | ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಎಕ್ಕಾರು ಗ್ರಾಮ ಪಂಚಾಯತ್ ಮಂಗಳೂರು ತಾಲೂಕು | 04-08-2023 | ನರ್ಮ್ ಬಸ್ಸುಗಳ ಸಂಚಾರ ಕಲ್ಪಿಸಿಕೊಡುವ ಕುರಿತು. ಮಂಗಳೂರು – ಕಿನ್ನಿಗೋಳಿ ಹಾಗೂ ಬಿಸಿರೋಡ್-ಕಿನ್ನಿಗೋಳಿ |
| 13. | ಶ್ರೀ.ಯು.ಟಿ. ಖಾದರ್ ಫರೀದ್, ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ | 11-08-2023 | ಉಳ್ಳಾಲ ತಾಲೂಕಿನ ನರಿಂಗಾನ ಗ್ರಾಮದ ಮುಡಿಪು-ಹೂಹಾಕುವಕಲ್ಲು-ಮೂರುಗೋಳಿ-ಕಲ್ಕಂಜ-ತೌಡುಗೋಳಿ-ನರಿಂಗಾನ-ಮಂಜನಾಡಿ-ದೇರಳಕಟ್ಟೆ ಮಾರ್ಗವಾಗಿ ಮಂಗಳೂರು ನಗರಕ್ಕೆ ಹಾಗೂ ನರಿಂಗಾನ ಗ್ರಾಮದ ಗಡಿಭಾಗವಾದ ಶ್ರೀ. ಕಾವಿ ಸುಬ್ರಹ್ಮಣ್ಯ ದೇವಾಸ್ಥಾನದ ಬದಿಯಿಂದ ತೌಡುಗೋಳಿ-ಕೆದುಂಬಾಡಿ-ನೆತ್ತಿಲಪದವು-ಕಲ್ಲರಕೋಡಿ-ಮುರತ್ತಂಗಡಿ-ಮಂಜನಾಡಿ-ದೇರಳಕಟ್ಟೆ ಮಾರ್ಗವಾಗಿ ಮಂಗಳೂರು ನಗರವನ್ನು ಸಂಪರ್ಕಿಸಲು ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು ಸಂಚರಿಸಲು ಅವಕಾಶ ಮಾಡುವಂತೆ ಕೋರಿ . |

| | | | |
|---|---|---|---|
| 14. | ಸಾರ್ವಜನಿಕರ ಪರವಾಗಿ | 21-08-2023 | ಶೇಡಿಗುರಿಯಿಂದ ಸ್ಟೇಟ್ ಬ್ಯಾಂಕ್ ಗೆ ಸರಕಾರಿ ಬಸ್ಸು ನೀಡುವ ಬಗ್ಗೆ. |
| 15. | ಅಶೋಕನಗರ ಯುವಕ ಸಂಘ(ರಿ) | 01-02-2024 | ಶೇಡಿಗುರಿಯಿಂದ ಸ್ಟೇಟ್ ಬ್ಯಾಂಕ್ ಮತ್ತು ಮಂಗಳಾದೇವಿಗೆ ಸರಕಾರಿ ಬಸ್ಸು |
| 16. | ಶ್ರೀ. ಜಯರಾಮ,<br>ಮಾನ್ಯ ಅಧ್ಯಕ್ಷರು ಅಶೋಕನಗರ ಯುವಕ ಸಂಘ | 12-11-2024 | ಶೇಡಿಗುರಿಯಿಂದ ಸ್ಟೇಟ್ ಬ್ಯಾಂಕ್ ಮತ್ತು ಮಂಗಳಾದೇವಿಗೆ ಸರಕಾರಿ ಬಸ್ಸು |
| 17. | ಡಾ.ಭರತ್ ಶೆಟ್ಟಿ ವೈ,<br>ಮಾನ್ಯ ಶಾಸಕರು ಮಂಗಳೂರು ನಗರ ಉತ್ತರ ವಿಧಾನಸಭಾ ಕ್ಷೇತ್ರ | 15-09-2023 | ಸ್ಟೇಟ್ ಬ್ಯಾಂಕ್‌ನಿಂದ ಅತ್ರೆಬೈಲ್ ಗೆ ಸರಕಾರಿ ಬಸ್ಸು |
| 18. | ಶ್ರೀ. ದಿನೇಶ್ ಕುಂಪಲ, ಸೋಮೇಶ್ವರ, ಮಂಗಳೂರು | 30-10-2023 | ಕುಂಪಲ ಪ್ರದೇಶಕ್ಕೆ ಸರಕಾರಿ ಬಸ್ಸಿನ ವ್ಯವಸ್ಥೆ. |
| 19. | ಪಾವೂರು ಗ್ರಾಮ ಪಂಚಾಯತ್ ಉಳ್ಳಾಲ ತಾಲೂಕು | 23-04-2024 | ಪಾವೂರು ಗ್ರಾಮಕ್ಕೆ ಸರಕಾರಿ ಬಸ್ಸಿನ ವ್ಯವಸ್ಥೆ. |
| 20. | ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಮೊಂಟೆ ಪದವು | 02-12-2024 | ಮಂಗಳೂರಿನಿಂದ –ನಾಟೆಕಲ್-ಮೊಂಟೆಪದವು ಮಾರ್ಗವಾಗಿ ಮುಡಿಪುವಿಗೆ ಹೆಚ್ಚುವರಿ ಸರಕಾರಿ ಬಸ್ಸಿನ ವ್ಯವಸ್ಥೆ |
| 21. | ಶ್ರೀ. ಇನಾಯತ್ ಅಲಿ, ಮಾನ್ಯ ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ. | 14-11-2024 | ಸುರತ್ಕಲ್-ಮುಂಚೂರು -ಮಂಗಳೂರು ನಗರದಿಂದ –ಮಧ್ಯ –ಚೇಳ್ಯಾರು ನಗರಕ್ಕೆ ಬಸ್ಸಿನ ವ್ಯವಸ್ಥೆ. |
| 22. | ಮಾನ್ಯ ಅಧ್ಯಕ್ಷರು, ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ ಬಜಲ್ ಪಕ್ಕಲಡ್ಕ ಘಟಕ | 29-05-2024 | ಮಂಗಳೂರು ಸ್ಟೇಟ್ ಬ್ಯಾಂಕ್‌ನಿಂದ ಬಜಲ್-ಜಲ್ಲಿಗುಡ್ಡ-ಫೈಸಲ್ ನಗರ ನಡುವೆ ಸಾರಿಗೆ ಸೌಲಭ್ಯ. |
| 23. | ಮಾನ್ಯ ಅಧ್ಯಕ್ಷರು, ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ ಮೊಂಟೆಪದವು ಘಟಕ | 18-09-2023 | ಮಂಗಳೂರಿನಿಂದ –ನಾಟೆಕಲ್-ಮೊಂಟೆಪದವು ಮಾರ್ಗವಾಗಿ ಸರ್ಕಾರಿ ಬಸ್ ಸೌಲಭ್ಯ ಕಲ್ಪಿಸುವಂತೆ ಕೋರಿ. |
| 24. | ಶ್ರೀ.ಮೊಹಮ್ಮದ್ ರಫೀಕ್,<br>ಮಾನ್ಯ ಅಧ್ಯಕ್ಷರು ಕಣ್ಣೂರು ವಾರ್ಡ್ ಕಾಂಗ್ರೆಸ್ ಕಮಿಟಿ | 04-10-2023 | ಸ್ಟೇಟ್ ಬ್ಯಾಂಕ್-ಅಡ್ಯಾರ್ ಸಹ್ಯಾದ್ರಿ ಕಾಲೇಜ್ -ಸರಕಾರಿ ಬಸ್ಸು ಮಂಜೂರಾತಿಗಾಗಿ. |
| 25. | ಡಾ.ಭರತ್ ಶೆಟ್ಟಿ ವೈ,<br>ಮಾನ್ಯ ಶಾಸಕರು ಮಂಗಳೂರು ನಗರ ಉತ್ತರ ವಿಧಾನಸಭಾ ಕ್ಷೇತ್ರ | 12-10-2023 | ಮಂಗಳೂರು ತಾಲೂಕಿನ ಶಕ್ತಿನಗರ, ಪ್ರೀತಿನಗರ, ಎಂಬಲ್ಲಿಗೆ ಹೆಚ್ಚುವರಿ ಬಸ್ಸು. 2. ನೀರುಮಾರ್ಗ ಒಳಪ್ರದೇಶದ ಕೆಲರಾಯಿ ನಶಿಫ್ ಗೆ ಹೆಚ್ಚುವರಿ ಬಸ್ಸು. |
| 26. | ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಬಾಳೆಪುಣಿ ಗ್ರಾಮ ಪಂಚಾಯತ್ ಉಳ್ಳಾಲ ತಾಲೂಕು | 13-11-2023 | ಬಾಳೆಪುಣಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಕೈರಂಗಳ ಗ್ರಾಮದ ನಡುಪದವಿಗೆ ಸರಕಾರಿ ಬಸ್ಸು ವ್ಯವಸ್ಥೆ. |
| 27. | ಶ್ರೀ.ದಿನೇಶ್ ಗುಂಡೂರಾವ್,<br>ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ದ.ಕ. ಜಿಲ್ಲಾ ಉಸ್ತುವಾರಿ ಸಚಿವರು. | 09-11-2023 | ಮಂಗಳೂರು ಮಹಾನಗರ ವ್ಯಾಪ್ತಿಯ ಕಣ್ಣೂರು 52ನೇ ವಾರ್ಡ್ ಪ್ರದೇಶಕ್ಕೆ ಸರಕಾರಿ ಬಸ್ಸಿನ ಸೌಲಭ್ಯ ಒದಗಿಸುವ ಬಗ್ಗೆ. |
| 28. | ಮಾನ್ಯ ಅಧ್ಯಕ್ಷರು, ನೀರುಮಾರ್ಗ ಗ್ರಾಮ ಪಂಚಾಯತ್. | 15-11-2023 | ಸ್ಟೇಟ್ ಬ್ಯಾಂಕ್-ನೀರಳ್ಕ-ಬೊಂಡಂತಿಲ ಮಲ್ಲೂರು ಹಾಗೂ ಸ್ಟೇಟ್ ಬ್ಯಾಂಕ್ –ನೀರುಮಾರ್ಗ-ಮಾಣೂರು-ಮೇರ್ಲಪದವು-ಅಡ್ಯಾರು ಮಾರ್ಗವಾಗಿ ಬಸ್ಸಿನ ವ್ಯವಸ್ಥೆ ಕಲ್ಪಿಸಿ ಕೊಡುವ ಬಗ್ಗೆ. |
| 29. | ಮಾನ್ಯ ಅಧ್ಯಕ್ಷರು, ಮುನ್ನೂರು ಗ್ರಾಮ ಪಂಚಾಯತ್ , ಉಳ್ಳಾಲ ತಾಲೂಕು.ದ.ಕ. | 02-12-2023 | ಮಂಗಳೂರು ಸ್ಟೇಟ್ ಬ್ಯಾಂಕ್ ನಿಂದ ದೆಬ್ಬೆಲಿವರೆಗೆ ಸರಕಾರಿ ಬಸ್ಸಿನ ವ್ಯವಸ್ಥೆ. |
| 30. | ಮಾನ್ಯ ಅಧ್ಯಕ್ಷರು, ಮುನ್ನೂರು ಗ್ರಾಮ ಪಂಚಾಯತು ಉಳ್ಳಾಲ ತಾಲ್ಲೂಕು | 2.12.2024 | ಮಂಗಳೂರು ಸ್ಟೇಟ್ ಬ್ಯಾಂಕ್ ನಿಂದ ಮುನ್ನೂರು ಗ್ರಾಮದ ವಯಾ ಕುತ್ತಾರು ಅಂಬ್ಲಮೊಗರು ಎಲ್ಯಾರ್‌ಪದವು ನ್ಯೂಪಡ್ಪು-ದೆಬ್ಬೆಲಿವರೆಗೆ ಸರಕಾರಿ ಬಸ್ಸಿನ ಸಂಚಾರ ಒದಗಿಸುವ ಬಗ್ಗೆ. |
| 31. | ಭಾರತ ಪ್ರಜಾಸತ್ತಾತ್ಮಕ ಯವಜನ ಫೆಡರೇಶನ್ ಮೊಂಟೆಪದವು ಘಟಕ | 02.12.2024 | ಮಂಗಳೂರಿನಿಂದ-ನಾಟೆಕಲ್-ಮೊಂಟೆಪದವು ಮಾರ್ಗವಾಗಿ ಮುಡಿಪುವಿಗೆ ಹೆಚ್ಚುವರಿ ಸರ್ಕಾರಿ ಬಸ್ ಸೌಲಭ್ಯ ಕಲ್ಪಿಸುವಂತೆ ಕೋರಿ. |

| | | | |
|---|---|---|---|
| 32. | ಮಾನ್ಯ ಅಧ್ಯಕ್ಷರು, ತಲಪಾಡಿ ಗ್ರಾಮ ಪಂಚಾಯತ್, ಉಳ್ಳಾಲ ತಾಲ್ಲೂಕು | 12.09.2023 | ತಲಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಮಾಧವಪುರ ದೇವಿನಗರ, ನಾರ್ಲ, ಪಡೀಲು, ಶ್ರೀ ದುರ್ಗಪರಮೇಶ್ವರಿ ದೇವಸ್ಥಾನ-ದೇವಿಪುರ ಕಡೆಗೆ ಸಾರಿಗೆ ಸೌಲಭ್ಯ ಒದಗಿಸುವ ಬಗ್ಗೆ. |
| 33. | ಶ್ರೀ ನೂಯಿ ಬಾಲಕೃಷ್ಣರಾವ್, ಮಾನ್ಯ ಅಧ್ಯಕ್ಷರು, ಅಡ್ಡೂರು ನಾಗರಿಕ ಸಮಿತಿ | 16.2.2024 | ಶ್ರೀ ಪೊಳಲಿ ಕ್ಷೇತ್ರಕ್ಕೆ ಎರಡು ಬಸ್ಸು ಓಡಾಡುವಂತೆ ಸ್ಟೇಟ್‌ಬ್ಯಾಂಕ್ ನಿಂದ ಪೊಳಲಿಗೆ ಸಾರಿಗೆ ಸೌಲಭ್ಯ ಒದಗಿಸುವ ಬಗ್ಗೆ. |
| 34. | ಭಾರತ ಪ್ರಜಾಸತ್ತಾತ್ಮಕ ಯವಜನ ಫೆಡರೇಶನ್, ಅಂಬ್ಲಮೊಗರು | 08.04.2024 | 1. ಸ್ಟೇಟ್ ಬ್ಯಾಂಕ್‌ನಿಂದ ಪಂಪ್‌ವೆಲ್ ತೊಕ್ಕೋಟ್ಟು ಮುಕಾಂರ ಕುತ್ತಾರು ಅಂಬ್ಲಮೊಗರು ಎಲ್ಯಾರ್‌ಪದವು ದೆಬ್ಬೆಲಿ, ಹರೆಕಳ ಪ್ರದೇಶಕ್ಕೆ 1 ನರ್ಮ ಬಸ್ಸು ನೀಡುವ ಬಗ್ಗೆ 2.ಸ್ಟೇಟ್ ಬ್ಯಾಂಕ್‌ನಿಂದ ಕುತ್ತಾರು ರೇಂಜಾಡಿ, ಬೆಳ್ಕ, ಗ್ರಾಮಚಾವಡಿ ಪಾಣೆಲ ಆಗಿ ಬಿ.ಸಿ.ರೋಡ್‌ಗೆ 1 ನರ್ಮ ಬಸ್ಸು . 3.ಸ್ಟೇಟ್‌ಬ್ಯಾಂಕ್‌ನಿಂದ ಎಲ್ಯಾರ್‌ಪದವು ಆಗಿ ಮುಡಿಪು ತನಕ 1 ನರ್ಮ ಬಸ್ಸು 4.ಸ್ಟೇಟ್‌ಬ್ಯಾಂಕ್‌ನಿಂದ ಎಲ್ಯಾರ್‌ಪದವು ಆಗಿ ಸಜಿಪ ಬೋಳಿಯಾರ ಆಗಿ ಬಿಸಿ ರೋಡ್‌ಗೆ 1 ನರ್ಮ ಬಸ್ಸು |
| 35. | ಶ್ರೀ. ಸತೀಶ್ ಚೇಳ್ಯಾರು | 20-04-2024 | ಚೇಳ್ಯಾರ್ ನಿಂದ ಮಂಗಳೂರು ಕಡೆಗೆ ಅಥವಾ ಕಾವೂರು ಕಡೆ ಬೆಳಿಗ್ಗೆ ಮತ್ತು ಸಂಜೆ ಬಸ್ ವ್ಯವಸ್ಥೆ ಒದಗಿಸುವ ಬಗ್ಗೆ. |
| 36. | ಇನಾಯತ್ ಅಲಿ, ಮಾನ್ಯ ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಪ್ರದೇಶ ಕಾಂಗ್ರೇಸ್ ಸಮಿತಿ ಮತ್ತು ಮಳಲಿ / ಪೊಳಲಿ ಗ್ರಾಮಸ್ಥರು | 01.03.2024 | ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರದ Mangalore City Gurupura Kaikamba Arbi-Nadaje-Jodutadame-Malali-Kajila-Nooyi Polali ರೂಟ್ ಗೆ ಸರಕಾರಿ ಬಸ್ ವ್ಯವಸ್ಥೆ ಒದಗಿಸುವ ಬಗ್ಗೆ. |
| 37. | ಶ್ರೀ ಐವನ್ ಡಿಸೋಜಾ, ಮಾಜಿ ಶಾಸಕರು ಕರ್ನಾಟಕ ವಿಧಾನ ಪರಿಷತ್. | 7.11.2024 | ಕರ್ನಾಟಕ ಶಕ್ತಿ ಯೋಜನೆಯ ಪ್ರಕಾರ ಶಕ್ತಿನಗರದ ಪ್ರೀತಿನಗರ ದಿಂದ ಸ್ಟೇಟ್‌ಬ್ಯಾಂಕ್ ನಡುವೆ ಬಸ್ಸ್ ಅರಂಬಿಸಲು ಕೋರಿರುವ ಬಗ್ಗೆ |
| 38. | ಶ್ರೀ ಹರಿಕೇಶ ಶೆಟ್ಟಿ, ಮಾನ್ಯ ಅಧ್ಯಕ್ಷರು, ಉಳಾಯಿಬೆಟ್ಟು ಗ್ರಾಮ ಪಂಚಾಯತ್ | 07.05.2024 | ಮಂಗಳೂರಿನಿಂದ ಪರಂಗಿಪೇಟೆ, ವಾಮಂಜೂರು, ಉಳಾಯಿಬೆಟ್ಟು, ಮಲ್ಲೂರು, ಕಲಾಯಿ, ಅಬ್ಬೆಟ್ಟು ಕ್ರಾಸ್, ಕಲ್ಪನೆ, ಬೆಂಜನ ಪದವು, ಕೊಡ್ಮಣ್, ನೆತ್ತರಕೆರೆ, ಕಡೆಗೊಳಿ, ಮಾರಿಪಳ್ಳ ಮಾರ್ಗಗಳಿಗೆ ಸಾರಿಗೆ ಸೌಲಭ್ಯ |
| 39. | ಶ್ರೀ. ಡಿ ವೇದವ್ಯಾಸ ಕಾಮತ್, ಮಾನ್ಯ ಶಾಸಕರು ಮಂಗಳೂರು ನಗರ ದಕ್ಷಿಣ | 30.09.2024 | ಸ್ಟೇಟ್ ಬ್ಯಾಂಕ್ ನಿಂದ ಸಿಲ್ವರ್ ಗೇಟ್ ಮಾರ್ಗವಾಗಿ ಸರಿಪಳ್ಳಕ್ಕೆ ಕೆ.ಎಸ್.ಆರ್.ಟಿ.ಸಿ ಬಸ್ಸು ಸಂಚಾರ ಮಾಡುವ ಬಗ್ಗೆ |
| 40. | ಡಾ ಭರತ್ ಶೆಟ್ಟಿ ವೈ, ಮಾನ್ಯ ಶಾಸಕರು ಮಂಗಳೂರು ನಗರ ಉತ್ತರ | 26.07.2024 | ಸ್ಟೇಟ್ ಬ್ಯಾಂಕ್-ಪಿವಿಎಸ್, ಲಾಲಾಭಾಗ್, ಲೇಡಿಹಿಲ್, ಕೊಟ್ಟಾರ, ಕೊಟ್ಟಾರ ಚೌಕಿ, ಕೂಳೂರು, ಪಂಜಿಮೊಗೆರು, ಎಂಎಸಿಟ್ಟಿ ಕಾಲೇಜು ಮಾರ್ಗವಾಗಿ ತ್ರಿಶಾ ಕಾಲೇಜ್ ಹೊಸ ಕ್ಯಾಂಪಸ್‌ಗೆ ಬಸ್ಸ್ ವ್ಯವಸ್ಥೆ ಮಾಡುವ ಬಗ್ಗೆ |
| 41. | ಡಾ ಭರತ್ ಶೆಟ್ಟಿ ವೈ, ಮಾನ್ಯ ಶಾಸಕರು ಮಂಗಳೂರು ನಗರ ಉತ್ತರ. | 05.11.2024 | ಮಂಗಳೂರು ಮಹಾನಗರ ವ್ಯಾಪ್ತಿಯ ಮರಕಡ 14 ನೇ ವಾರ್ಡ್ ಕೃಷ್ಣನಗರಕ್ಕೆ ಸರಕಾರಿ/ ಖಾಸಗಿ ಬಸ್ಸಿನ ಸೌಲಭ್ಯ ಒದಗಿಸುವ ಬಗ್ಗೆ. |
| 42. | ಸಾರ್ವಜನಿಕರ ಪರವಾಗಿ | 26.03.2024 | ಮಂಗಳೂರು ಉತ್ತರ ವಿದಾನ ಸಬಾ ಕ್ಷೇತ್ರಕ್ಕೆ ಉಳಾಬೆಟ್ಟು ಮಲ್ಲೂರು ಗ್ರಾಮಕ್ಕೆ ಸರಕಾರಿ ಬಗ್ಗೆ ಒದಗಿಸುವ ಬಗ್ಗೆ |
| 43. | ಶ್ರೀ. ಜೆ ಆರ್ ಲೋಬೋ, ಮಾಜಿ ಶಾಸಕರು ಮಂಗಳೂರು ನಗರ ದಕ್ಷಿಣ | 17.07.2024 | ಕೆ.ಎಸ್.ಆರ್.ಟಿ.ಸಿ ನಗರ ಸಾರಿಗೆ ಬಸ್ಸನ್ನು ಸ್ಟೇಟ್‌ಬ್ಯಾಂಕ್ ನಿಂದ ಬಜಾಲ್ ಕಲ್ಲಕಟ್ಟೆ ವರೆಗೆ ಸೇವೆ ನೀಡುವ ಬಗ್ಗೆ |
| 44. | ಸಾರ್ವಜನಿಕರ ಪರವಾಗಿ | 25.06.2024 | ಕೆ.ಎಸ್.ಆರ್.ಟಿ.ಸಿ ನಗರ ಸಾರಿಗೆ ಬಸ್ಸನ್ನು ಸ್ಟೇಟ್‌ಬ್ಯಾಂಕ್ ನಿಂದ ಬಜಾಲ್ ಕಲ್ಲಕಟ್ಟೆ ವರೆಗೆ ಸೇವೆ ನೀಡುವ ಬಗ್ಗೆ |
| 45. | ಸಾರ್ವಜನಿಕರ ಪರವಾಗಿ | 25.06.2024 | ಕಂಕನಾಡಿ ಪಡೀಲ್ ರೈಲು ನಿಲ್ದಾಣ ದಿಂದ ಕಟೀಲು ಮಾರ್ಗಕ್ಕೆ ಕೆ ಎಸ್ ಆರ್ ಟಿ ಸಿ ಬಸ್ಸು ನೀಡುವ ಕುರಿತು |
| 46. | ಸಾರ್ವಜನಿಕರ ಪರವಾಗಿ | 01.03.2024 | ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರದ Mangalore City Gurupura Kaikamba Arbi-Nadaje-Jodutadame-Malali-Kajila-Nooyi Polali ರೂಟ್ ಗೆ ಸರಕಾರಿ ಬಸ್ ವ್ಯವಸ್ಥೆ ಒದಗಿಸುವ ಬಗ್ಗೆ. |

| | | | |
|---|---|---|---|
| 47. | ಶ್ರೀ. ಇನಾಯತ್ ಅಲಿ, ಮಾನ್ಯ ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ. | 12.07.2024 | ಗಂಜಿಮಠ ಗ್ರಾಮ ಪಂಜಾಯತ್ ವ್ಯಾಪ್ತಿಯ ಗುರುಪುರ, ನಾಡಜೆ ಮಳಲಿ ಸಾರ್ವಜನಿಕರ ಮನವಿ |
| 48. | ಶ್ರೀ. ಇನಾಯತ್ ಅಲಿ, ಮಾನ್ಯ ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ. | 14.11.2024 | ಮುಂಚೂರು, ಮಧ್ಯ, ಚೇಳ್ಯಾರು ಗ್ರಾಮಕ್ಕೆ ಸಾರಿಗೆ ಸೌಲಭ್ಯ |
| 49. | ಸಾರ್ವಜನಿಕರ ಪರವಾಗಿ | 13.01.2025 | ಮಂಗಳೂರು,ಕಾವೂರು,ಕೆಂಜಾರು,ಅದ್ಯಪಾಡಿ,ಬೀಬಿಲಚ್ಚಿಲ್ ದುರ್ಗಾಪರಮೇಶ್ವರಿ ದೇವಸ್ಥಾನ ಮುರನಗರ (Old Airport) ಆಗಿ ಬಟ್ಟೆ ನಗರಕ್ಕೆ ಹೊಸ ಬಸ್ ವ್ಯವಸ್ಥೆ ಮನವಿ. |
| 50. | ಕನ್ನಗುಡ್ಡೆ ಸರಿಪಳ್ಳ ನಿವಾಸಿಗಳು | 17.12.2024 | ಕನ್ನಗುಡ್ಡೆ, ಸರಿಪಳಕ್ಕೆ ಬಸ್ ವ್ಯವಸ್ಥೆ ಮನವಿ ಕುರಿತು. |
| 51. | ಡಾ.ಭರತ್ ಶೆಟ್ಟಿ ವೈ, ಮಾನ್ಯ ಶಾಸಕರು, ಮಂಗಳೂರು ನಗರ ಉತ್ತರ ವಿಧಾನಸಭಾ ಕ್ಷೇತ್ರ | 19-02-2025 | ಮಂಗಳೂರಿನಿಂದ ಸ್ಟೇಟ್ ಬ್ಯಾಂಕ್-ಗಣೇಶಪುರಕ್ಕೆ ಬಸ್ ಸೌಲಭ್ಯ ಕಲ್ಪಿಸುವಂತೆ ಮನವಿ |
| 52. | ಶ್ರೀ. ಡಿ.ಕೆ ಶಿವಕುಮಾರ್, ಮಾನ್ಯ ಉಪ ಮುಖ್ಯಮಂತ್ರಿ, ಬೆಂಗಳೂರು, (ಮುಖ್ಯ ಸಂಚಾರ ವ್ಯವಸ್ಥಾಪಕರು(ಕಾ) | 27-02-2025 | ಮಂಗಳೂರು ನಗರ-ಕುಲಶೇಖರ-ವಾಮಂಜೂರು-ಗುರುಪುರ-ಕೈಕಂಬ-ಅಡ್ಡೂರು ಮಾರ್ಗವಾಗಿ ಸಾರಿಗೆ |
| 53. | ಮುಖ್ಯ ಸಂಚಾರ ವ್ಯವಸ್ಥಾಪಕರು(ಕಾ) | 10-03-2025 | ಮೂಡುಶೆಡ್ಡೆ-ಸುರತ್ಕಲ್ ಮಾರ್ಗದಲ್ಲಿ ಬೆಳ್ಳಿಗ್ಗೆ ಮತ್ತು ಸಾಯಂಕಾಲ ಬಸ್ ಸೌಲಭ್ಯ ಕಲ್ಪಿಸಿರುವಂತೆ ಕೋರಿರುವ ಬಗ್ಗೆ |
| 54. | ಶ್ರೀ. ಯು.ಟಿ.ಖಾದರ್ ಫರೀದ್, ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ. | 20.02.2025 | ಮಂಗಳೂರು-ತೊಕ್ಕೊಟ್ಟು-ದೇರಳಕಟ್ಟೆ-ಮುಡಿಪು ಜಂಕ್ಷನ್-ಬೋಳಿಯಾರು ಜಂಕ್ಷನ್-ಮುಖಾಂತರ ಸಜಿಪನಡು ಮತ್ತು ಮೆಲ್ಕಾರು-ಬಿ.ಸಿ.ರೋಡು-ಫರಂಗಿಪೇಟೆ-ಮುಡಿಪು-ದೇರಳಕಟ್ಟೆ. ಬಸ್ ಮನವಿ. |
| 55. | ಶ್ರೀ. ಇನಾಯತ್ ಅಲಿ, ಮಾನ್ಯ ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ. | 15-03-2025 | ಮಂಗಳೂರು ಸಿಟಿ ಕಾವೂರು-ಬಜ್ಪೆ-ಸುಂಕದಕಟ್ಟೆ-ಕಜೆ ಕೊಲಂಬೆ-ಕೊಲಂಬೆ ಸ್ಕೂಲ್-ಉಣಿಲೆ-ಹಳೆ ಎರ್‌ಪೋರ್ಟ್ |
| 56. | ಶ್ರೀ. ಬಾಬು, ಸಾರ್ವಜನಿಕರು | 11- 02-2 5 | ಮಂಗಳೂರು-ಕೈಕಂಬ-ಅಬ್ರಿ ನಾಡಿಗೆ -ಮಳಲಿ-ಪೊಳಲಿಗೆ ಬಸ್ ಮನವಿ |
| 57. | ಶ್ರೀ.ದಿನೇಶ್ ಗುಂಡೂರಾವ್, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ದ.ಕ. ಜಿಲ್ಲಾ ಉಸ್ತುವಾರಿ ಸಚಿವರು. | 20-03-2025 | ಅಡ್ಯಾರು-ಮಾಣೂರು-ನೀರುಮಾರ್ಗ-ಕೆಲರೈ-ನೀರಾಲ-ವಾಮಂಜೂರು-ಮಂಗಳಜ್ಯೋತಿ-ಬೊಂದೆಲ್-ಯೆಯ್ಯಾಡಿ ಮಾರ್ಗವಾಗಿ ಮಂಗಳೂರಿಗೆ ಬಸ್ ಮನವಿ. |
| 58. | ಪಂಚಾಯತ್ ಅಭಿವೃದ್ಧಿ ಅಧಿಕಾರಿ ಪಾವೂರು ಗ್ರಾಮ ಪಂಚಾಯತ್ ಉಳ್ಳಾಲ | 05-05-2025 | ಪಾವೂರು ಗ್ರಾಮಕ್ಕೆ ಸರಕಾರಿ ಬಸ್ ಮನವಿ |
| 59. | ಶ್ರೀ. ವಶ್ವಿಕಾ ಎಸ್.ಎಂ. | 07-05-2025 | ಕಿನ್ನಿಗೋಳಿಯಿಂದ ಮೂಡಬಿದರೆ ವರೆಗೆ ಬಸ್ ಮನವಿ |
| 60. | ಶ್ರೀ.ದಿನೇಶ್ ಗುಂಡೂರಾವ್, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ದ.ಕ. ಜಿಲ್ಲಾ ಉಸ್ತುವಾರಿ ಸಚಿವರು. | 23-05-2025 | 1. ಮಂಗಳೂರು ನಗರ-ಉರ್ವ ಸ್ಟೋರ್-ಕೋಡಿಕಲ್-ಕೂಳೂರು-ಪಣಂಬೂರು-ಸುರತ್ಕಲ್-ಕಾಟಿಪಳ್ಳ |
| | | | 2. ಮಂಗಳೂರು ನಗರ-ವಾಮಂಜೂರು-ಉಳಯಿಬೆಟ್ಟು-ಮಲ್ಲೂರ್ |
| | | | 3.ಮಂಗಳೂರು ನಗರ-ಕಾವೂರು-ಬಜ್ಪೆ-ಹಳೆ ಏರ್‌ಪೋರ್ಟ್ ರೋಡು-ಅದ್ಯಪಾಡಿ |
| | | | 4.ಮಂಗಳೂರು ನಗರ-ಗುರುಪುರ ಕೈಕಂಬ-ಅರ್ಬಿ-ನಡಾಜೆ-ಜೋಡುತಡಮೆ-ಮಳಲಿ-ಕಜೀಲ-ನೂಯಿ ಪೊಳಲಿ |
| | | | 5. ಮಂಗಳೂರು ನಗರ-ಕಾರ್ ಶೀಟ್-ಲೇಡಿಹಿಲ್-ಸುರತ್ಕಲ್-ಕೃಷ್ಣಾಪುರ-ಗಣೇಶಪುರ |
| | | | 6.ಮಂಗಳದೇವಿ-ಕಂಕನಾಡಿ-ಲಾಲ್ಬಾಗ್-ಸುರತ್ಕಲ್-ಕಾನಬಾಳ-ಗಣೇಶಪುರ-ಕೃಷ್ಣಾಪುರ |
| | | | 7.ಗಣೇಶಪುರ-ಕಾನ-ಬಾಲ-ಸುರತ್ಕಲ್-ಕೊಟ್ಟಾರ-ಜೋತಿ-ಹಂಪನಕಟ್ಟೆ- |

| | | | |
|---|---|---|---|
| | | | ಸ್ವೀಟ್ ಬ್ಯಾಂಕ್ |
| | | | 8. ಗಣೇಶಪುರ-ಸುರತ್ಕಲ್-ಕಾವೂರು-ಪಿಳಿಕುಲ |
| | | | 9.ಮಂಗಳೂರು ನಗರ-ಪಿವಿಎಸ್-ಲಾಲ್‌ಭಾಗ್-ದೇರಬೈಲ್-ಕೊಂಚಾಡಿ-ಆಕಾಶಬವನ |
| | | | 10. ಆಕಾಶ ಬವನ-ಕೊಂಚಾಡಿ-ದೇರಬೈಲ್-ಪಿವಿಎಸ್-ಲಾಲ್‌ಭಾಗ್-ಮಂಗಳೂರು ನಗರ |
| 61. | ಮುನ್ನೂರು ಗ್ರಾಮ ಪಂಚಾಯತ್ | 04.06.25 | ಮಂಗಳೂರಿನ ಬಿಜೈನಿಂದ ತೊಕ್ಕೊಟ್ಟು-ಕುತ್ತಾರು-ರಾಣಿಪುರ-ಅಂಬ್ಲಮೊಗರು-ಎಲ್ಯಾರ್ ಪದವು ಗ್ರಾಮ ಚಾವಡಿ ಆಗಿ ಪಜೀರುಗೆ ಹೋಗಿ ಬರುವ ಒಟ್ಟು ಕೇವಲ ಎರಡು ಟ್ರಿಪ್ ಮಾತ್ರ ಚಾಲ್ತಿಯಲ್ಲಿದ್ದು ಇದೇ ಬಸ್ ದಿನದಲ್ಲಿ ಕನಿಷ್ಠ ನಾಲ್ಕು ಮಾರ್ಗ ಅಥವಾ ಇನ್ನೊಂದು ಬಸ್ ಸಂಚರಿಸುವಂತೆ ಮನವಿ. |
| 62. | ಶ್ರೀ.ಶೇಕ್ ಮುಹಮ್ಮದ್ ಗುರುಪುರ ಬ್ಲಾಕ್ ಕಾಂಗ್ರೆಸ್ ಮಾನ್ಯ ಉಪಾಧ್ಯಕ್ಷರು, ಗುರುಪುರ ಬ್ಲಾಕ್ ಕಾಂಗ್ರೆಸ್ ಅಲ್ಪ ಸಂಖ್ಯಾತರ ಘಟಕ ಗುರುಪುರ ಮಂಗಳೂರು ಮತ್ತು ಕೈಕಂಬ ನಾಗರೀಕರ ಪರವಾಗಿ. | 19.06.2023 | ಮಂಗಳೂರಿನಿಂದ ಮೂಡುಬಿದ್ರೆ ಮಾರ್ಗವಾಗಿ ಕೆ.ಎಸ್.ಆರ್.ಟಿ.ಸಿ ಬಸ್ಸ್ ಸಂಚರಿಸಲು ಪರವಾನಿಗೆ ನೀಡುವ ಬಗ್ಗೆ |
| 63. | ಶ್ರೀ. ಮೊಹಮ್ಮದ್ ಯಾನೆ ಉಂಞ್ಞ, ಮೂಡುಬಿದ್ರೆ ಕಾರ್ಕಳ ಬೆಳುವಾಯಿ ಆಸುಪಾಸಿನ ಪ್ರಯಾಣಿಕರು | 19.06.2023 | ಮಂಗಳೂರು-ಕೈಕಂಬ-ಮೂಡುಬಿದ್ರಿ-ಬೆಳುವಾಯಿ-ಕಾರ್ಕಳದ ಕಡೆಗೆ ಸರ್ಕಾರಿ ಬಸ್ಸುಗಳನ್ನು ಆಯೋಜಿಸುವ ಬಗ್ಗೆ |
| 64. | ಮಾಜಿ ಜಿಲ್ಲಾ ಕೆ.ಎಸ್.ಆರ್.ಟಿ.ಸಿ. ಸಲಹಾ ಸಮಿತಿ ಸದಸ್ಯರು ಕೈಕಂಬ ಮಂಗಳೂರು | 19.06.2023 | ಮಂಗಳೂರು ಕುಡುಪು ವಾಮಂಜೂರು ಗುರುಪುರ ಕೈಕಂಬ ಮಾರ್ಗವಾಗಿ ಬಸ್ ಸಂಚಾರ ಕಲ್ಪಿಸುವ ಕುರಿತು |
| 65. | ಶ್ರೀ.ಉಮಾನಾಥ ಎ ಕೋಟ್ಯಾನ್ , ಮಾನ್ಯ ಶಾಸಕರು ಮುಲ್ಕಿ ಮೂಡುಬಿದ್ರೆ ಕ್ಷೇತ್ರ | 29.06.2023 | ಮಂಗಳೂರು-ಕೈಕಂಬ-ಮೂಡುಬಿದಿರೆ-ಬೆಳುವಾಯಿ-ಕಾರ್ಕಳ ಕಡೆಗೆ ಸರ್ಕಾರಿ ಬಸ್ಸುಗಳನ್ನು ಆಯೋಜಿಸುವ ಕುರಿತು |
| 66. | ಭಾರತಿ ಬೋಳಾರ್, ಮಾನ್ಯ ಪ್ರಧಾನ ಕಾರ್ಯದರ್ಶಿ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ. "ವಿಕಾಸ" ಹ್ಯಾಮಿಲ್ಟನ್ ಕಾಂಪ್ಲೆಕ್ಸ್, ಸ್ವೀಟ್‌ಬ್ಯಾಂಕ್ ಬಳಿ, ಮಂಗಳೂರು-575001 | 01.07.2023 | ದ.ಕ ಜಿಲ್ಲೆಯಲ್ಲಿ ಸ್ವಗಿತಗೊಂಡಿರುವ ನರ್ಮ್ ಬಸ್ ಸೇವೆ, ಜಿಲ್ಲೆಯ ವಿವಿಧ ಭಾಗಗಳಿಗೆ ಸರಕಾರಿ ಬಸ್‌ಗಳನ್ನು, ಮಂಗಳೂರು,ಮೂಡಬಿದ್ರಿ, ಕಾರ್ಕಳ, ಉಡುಪಿ ನಡುವೆ ಸರಕಾರಿ ಬಸ್ ಸೇವೆಗಳನ್ನು ಆರಂಭಿಸಲು ಒತ್ತಾಯಿಸಿ ಮನವಿ |
| 67. | ಶ್ರೀ. ಶೇಕ್ ಮಹಮ್ಮದ್, ಮಾನ್ಯ ಉಪಾಧ್ಯಕ್ಷರು ಗುರುಪುರ ಬ್ಲಾಕ್ ಕಾಂಗ್ರೆಸ್ ಅಲ್ಪ ಸಂಖ್ಯಾತರ ಘಟಕ) | 02.08.2023 | ಮಂಗಳೂರಿನಿಂದ ಮೂಡಬಿದ್ರೆ ಮಾರ್ಗವಾಗಿ ಕಾರ್ಕಳ ತನಕ ಕೆ.ಎಸ್.ಆರ್.ಟಿ.ಸಿ. ಬಸ್ಸು ಸಂಚರಿಸಲು ಪರವಾನಿಗೆ ನೀಡುವ ಬಗ್ಗೆ |
| 68. | ತಹಶೀಲ್ದಾರರು ಮೂಡುಬಿದಿರೆ ತಾಲೂಕು. | 26.07.2023 | ಮೂಡುಬಿದ್ರಿ ಮುಖಾಂತರ ಸರಕಾರಿ ಬಸ್ಸು ಓಡಿಸಲು ಮನವಿ. ಮೂಡುಬಿದ್ರಿ ಮುಖಾಂತರ ವಿದ್ಯಾಗಿರಿ, ಪುತ್ತಿಗೆ, ಕಿನ್ನಿಗೋಳಿ, ಮೂಲ್ಕಿಗೆ, ಮಂಗಳೂರು ಮೂಡಬಿದ್ರಿ ಕಾರ್ಕಳ |
| 69. | ಶ್ರೀ.ನೂಯಿ ಬಾಲಕೃಷ್ಣ ರಾವ್ (ಪಟೇಲರು), ಅದ್ಯಕ್ಷರು, ನಾಗರೀಕ ಸಮಿತಿ ಅಡ್ಡೂರು ಗುರುಪುರ ಮಂಗಳೂರು ದ.ಕ.ಜಿಲ್ಲೆ.. | 20.09.2023 | ಸರಕಾರಿ ಸವಲತ್ತಿನಿಂದ ವಂಚಿತರಾದ ದ.ಕ ಜಿಲ್ಲೆ(ಮಂಗಳೂರು, ಕೈಕಂಬ, ಮೂಡಬಿದ್ರೆ) ರೂಟಿನ ಸಾರ್ವಜನಿಕ ಪ್ರಯಾಣಿಕರು ಹಾಗೂ ಮಂಗಳೂರು, ಕೈಕಂಬ, ಪೊಳಲಿ, ಬಿ.ಸಿರೋಡ್(ಮಹಿಳೆಯರು) |
| 70. | ಸಾರ್ವಜನಿಕರ ಪರವಾಗಿ | 01.07.2024 | ಮಂಗಳೂರು-ಮೂಡಬಿದ್ರೆ-ಕಾರ್ಕಳ ಮಾರ್ಗವಾಗಿ ಸಾರಿಗೆ ಸೌಲಭ್ಯ ಕಲ್ಪಿಸುವ ಬಗ್ಗೆ |
| 71. | ಮಾನ್ಯ ಅದ್ಯಕ್ಷರು ಎಡಪದವು ಗ್ರಾಮ ಪಂಚಾಯತ್ | 21.01.2025 | ಮೂಡಬಿದ್ರೆಯಿಂದ ಮಂಗಳೂರಿಗೆ ಸಾರಿಗೆ ಸೌಲಭ್ಯ ಕಲ್ಪಿಸುವಂತೆ ಕೋರಿ. |

| | | | |
|---|---|---|---|
| 72. | ಶ್ರೀ.ಬಿ.ಎ. ಅಬೂಬಕ್ಕರ್, ಸದಸ್ಯರು ದ.ಕ. ಜಿಲ್ಲಾ ಕಾಂಗ್ರೆಸ್ | 30.06.2023 | ಮಂಗಳೂರು ನಿಂದ ಸ್ಥಳದಿಂದ ಕುಪ್ಪೆಪದವು-ಮೂಡಬಿದ್ರೆ ಮತ್ತು ಕುಪ್ಪೆಪದವು-ಬಿಸಿ ರೋಡ್ ಮಾರ್ಗ ಸಾರಿಗೆ ಸೌಲಭ್ಯ ಕಲ್ಪಿಸುವ ಬಗ್ಗೆ |
| 73. | ಪಂಚಾಯತ್ ಅಭಿವೃದ್ಧಿ ಅಧಿಕಾರಿ ಇರುವೈಲು ಗ್ರಾಮ ಪಂಚಾಯತ್ ಮೂಡಬಿದ್ರೆ ತಾಲೂಕು | 15.07.2023 | ಮೂಡಬಿದ್ರೆ ತಾಲೂಕು ಇರುವೈಲು ಗ್ರಾಮ ಪಂಚಾಯತ್ ವ್ಯಾಪ್ತಿಗೆ ಸರಕಾರಿ ಬಸ್ ಸೌಲಭ್ಯ ಕಲ್ಪಿಸುವ ಬಗ್ಗೆ |
| 74. | ಮಾನ್ಯ ಅಧ್ಯಕ್ಷರು, ಕುಪ್ಪೆಪದವು ಗ್ರಾಮ ಪಂಚಾಯತ್ ಮಂಗಳೂರು ತಾಲೂಕು, ದ.ಕ-574144 | 19.07.2023 | ಶಕ್ತಿ ಯೋಜನೆಯಡಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ ಬಸ್ ನಿಯೋಜನೆ ಕೋರಿ (ಕುಪ್ಪೆಪದವಿನಿಂದ ಮಂಗಳೂರು, ಪೂವಣಬೆಟ್ಟುವಿನಿಂದ ಮಂಗಳೂರು, ಬೊಳಿಯಾರದಿಂದ ಮಂಗಳೂರು, ಪೂವಣಿಬೆಟ್ಟುವಿನಿಂದ ಬಿ.ಸಿ.ರೋಡ್, ಕುಪ್ಪೆಪದವಿನಿಂದ ಮೂಡಬಿದಿರೆ, ಬೊಳಿಯದಿಂದ ಬಿ.ಸಿ.ರೋಡ್‌ಗೆ) |
| 75. | ಮಾನ್ಯ ಅಧ್ಯಕ್ಷರು, ಕುಪ್ಪೆಪದವು ಗ್ರಾಮ ಪಂಚಾಯತ್ ಮಂಗಳೂರು ತಾಲೂಕು, ದ.ಕ-574144 | 16.08.2023 | ಕುಪ್ಪೆಪದವು, ಪೂವಣಿಬೆಟ್ಟು, ಬೊಳಿಯದಿಂದ ವಿವಿಧ ಸ್ಥಳಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸುವ ಬಗ್ಗೆ. ಕುಪ್ಪೆಪದವು-ಮಂಗಳೂರು-ಮೂಡಬಿದರೆ, ಪೂವಣಿಬೆಟ್ಟು-ಮಂಗಳೂರು-ಬಿ ಸಿ ರೋಡು, ಬೊಳಿಯಾ-ಮಂಗಳೂರು-ಬಿ ಸಿ ರೋಡು |
| 76. | ಮಾನ್ಯ ಅಧ್ಯಕ್ಷರು, ಭಾರತೀಯ ರೈತ ಸೇನೆ | 30.09.2023 | ಮಂಗಳೂರು-ಕೈಕಂಬ-ಮೂಡುಬಿದಿರೆ-ಬೆಳುವಾಯಿ-ಕಾರ್ಕಳ ಕಡೆಗೆ ಸರ್ಕಾರಿ ಬಸ್ಸುಗಳನ್ನು ಆಯೋಜಿಸುವ ಕುರಿತು |
| 77. | ಪ್ರಾಂಶುಪಾಲರು Canara Engineering College ಮಂಗಳೂರು | 24.7.2024 | ಮಂಗಳೂರು ವಯಾ ಫರಂಗಿಪೇಟೆ, ಮಾರಿಪಳ್ಳ, ಕ್ಯಾಸ್/ಕಡೆಗೊಳಿ ಮಾರ್ಗವಾಗಿ ಪೊಳಲಿಗೆ ಬಸ್ಸು ಸೌಲಭ್ಯ ಕಲ್ಪಿಸುವ ಬಗ್ಗೆ |
| 78. | ಡಾ.ಭರತ್ ಶೆಟ್ಟಿ ವೈ, ಮಾನ್ಯ ಶಾಸಕರು, ಮಂಗಳೂರು ನಗರ ಉತ್ತರ ವಿಧಾನಸಭಾ ಕ್ಷೇತ್ರ | 19-02-2025 | ಮಂಗಳೂರಿನಿಂದ ಸ್ಪೋಟ್ ಬ್ಯಾಂಕ್-ಗಣೇಶಪುರಕ್ಕೆ ಬಸ್ ಸೌಲಭ್ಯ ಕಲ್ಪಿಸುವಂತೆ ಮನವಿ |
| 79. | ಶ್ರೀ.ಡಿ.ಕೆ ಶಿವಕುಮಾರ್, ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರಿ, ಬೆಂಗಳೂರು, (ಮುಖ್ಯ ಸಂಚಾರ ವ್ಯವಸ್ಥಾಪಕರು(ಕಾ) | 27-02-2025 | ಮಂಗಳೂರು ನಗರ-ಕುಲಶೇಖರ-ವಾಮಂಜೂ -ಗುರುಪುರ-ಕೈಕಂಬ-ಅಡ್ಡೂರು ಮಾರ್ಗವಾಗಿ ಸಾರಿಗೆ |
| 80. | ಶ್ರೀ. ಯು.ಟಿ.ಖಾದರ್ ಫರೀದ್, ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ. | 20.02.2025 | ಮಂಗಳೂರು-ತೊಕ್ಕೊಟ್ಟು-ದೇರಳಕಟ್ಟೆ-ಮುಡಿಪು ಜಂಕ್ಷನ್-ಬೋಳಿಯಾರು ಜಂಕ್ಷನ್-ಮುಖಾಂತರ ಸಜಿಪನಡು ಮತ್ತು ಮೆಲ್ಕಾರು-ಬಿ.ಸಿ.ರೋಡು-ಫರಂಗಿಪೇಟೆ-ಮುಡಿಪು-ದೇರಳಕಟ್ಟೆ. ಬಸ್ ಮನವಿ. |
| 81. | ಶ್ರೀ. ಇನಾಯತ್ ಅಲಿ, ಮಾನ್ಯ ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ. | 15-03-2025 | ಮಂಗಳೂರು ಸಿಟಿ ಕಾವೂರು-ಬಜ್ಪೆ-ಸುಂಕದಕಟ್ಟೆ-ಕಜೆ ಕೊಲಂಬೆ-ಕೊಲಂಬೆ ಸ್ಕೂಲ್-ಉಣಿಲೆ-ಹಳೆ ಎರ್‌ಪೋರ್ಟ್ |
| 82. | ಶ್ರೀ. ಬಾಬು | 11- 02-2 5 | ಮಂಗಳೂರು-ಕೈಕಂಬ-ಅಬ್ರಿ ನಾಡಿಗೆ -ಮಳಲಿ-ಪೊಳಲಿಗೆ ಬಸ್ ಮನವಿ |
| 83. | ಪಂಚಾಯತ್ ಅಭಿವೃದ್ಧಿ ಅಧಿಕಾರಿ ಪಾವೂರು ಗ್ರಾಮ ಪಂಚಾಯತ್ ಉಳ್ಳಾಲ | 05-05-2025 | ಪಾವೂರು ಗ್ರಾಮಕ್ಕೆ ಸರಕಾರಿ ಬಸ್ ಮನವಿ |
| 84. | ಶ್ರೀ.ದಿನೇಶ್ ಗುಂಡೂರಾವ್, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ದ.ಕ. ಜಿಲ್ಲಾ ಉಸ್ತುವಾರಿ ಸಚಿವರು. | 23-05-2025 | 1. ಮಂಗಳೂರು ನಗರ-ಉರ್ವ ಸ್ಟೋರ್-ಕೋಡಿಕಲ್-ಕೂಳೂರು-ಪಣಂಬೂರು-ಸುರತ್ಕಲ್-ಕಾಟಿಪಳ್ಳ |
| | | | 2. ಮಂಗಳೂರು ನಗರ-ವಾಮಂಜೂರು-ಉಳಯಿಬೆಟ್ಟು-ಮಾಲೂರ್ |
| | | | 3.ಮಂಗಳೂರು ನಗರ-ಕಾವೂರು-ಬಜ್ಪೆ-ಓಲ್ಡ್ ರ್ಪೋಟ್ ರೋಡ್-ಅದ್ಯಪಾಡಿ |
| | | | 4.ಮಂಗಳೂರು ನಗರ-ಗುರುಪುರ ಕೈಕಂಬ-ಅರ್ಬಿ-ನಡಾಜೆ-ಜೋಡುತಡಮೆ-ಮಲಳಿ-ಕಜೀಲ-ನೂಯಿ ಪೊಳಲಿ |
| | | | 5. ಮಂಗಳೂರು ನಗರ-ಕಾರ್ ಶೀಟ್-ಲೇಡಿಹಿಲ್-ಸುರತ್ಕಲ್-ಕೃಷ್ಣಾಪುರ-ಗಣೇಶಪುರ |
| | | | 6.ಮಂಗಳದೇವಿ-ಕಂಕನಾಡಿ-ಲಾಲ್ಬಾಗ್-ಸುರತ್ಕಲ್-ಕಾನಬಾಳ-ಗಣೇಶಪುರ-ಕೃಷ್ಣಾಪುರ |

| | | | |
|---|---|---|---|
| 85. | ಶ್ರೀ.ಉಮಾನಾಥ ಕೋಟ್ಯಾನ್,<br>ಮಾನ್ಯ ಸಚಿವರು, ಮೂಡಬಿದಿರೆ ಜಿಲ್ಲಾಧಿಕಾರಿ ಮಂಗಳೂರು ಮತ್ತು ಊರಿನ ನಾಗರಿಕರು . | 10-07-2025 | ಚೇಳಾರು ಯಿಂದ ಕುಂಜತಬೈಲು, ಸ್ಟೇಟ್ ಬ್ಯಾಂಕ್ ನಿಂದ ಚೇಳರು ಗೆ ಬಸ್ ಮನವಿ. |
| 86. | ಶ್ರೀ. ಡಿ. ವೇದವ್ಯಾಸ ಕಾಮತ್,<br>ಮಾನ್ಯ ಶಾಸಕರು ಮಂಗಳೂರು ನಗರ ದಕ್ಷಿಣ ವಿಧಾನಸಭಾ ಕ್ಷೇತ್ರ. | 01.08.25 | ಸ್ಟೇಟ್‌ಬ್ಯಾಂಕ್-ಲಾಲ್‌ಬಾಗ್-ಕೊಟ್ಟಾರ- ಕೂಳೂರು-ತಣ್ಣೀರುಬಾವಿ-ಬೆಂಗ್ರೆ-ತೋಟಬೆಂಗ್ರೆ ಗೆ ಬಸ್ ಮನವಿ. |
| 87. | ಶ್ರೀ. ಡಾ.ಭರತ್ ಶೆಟ್ಟಿ ವೈ,<br>ಮಾನ್ಯ ಶಾಸಕರು, ಮಂಗಳೂರು ನಗರ ಉತ್ತರ ವಿಧಾನಸಭಾ ಕ್ಷೇತ್ರ | 04-08-2025 | ಅತ್ರೆಬೈಲ್, ಕುಂಜತ್ತ್ ಬೈಲ್, ಕಾವೂರು, ಬೊಂದೇಲ್, ಕೆ.ಪಿ.ಟಿ, ನಂತೂರು, ಮಲ್ಲಿಕಟ್ಟೆ, ಕಂಕನಾಡಿ, ಪಂಪ್ ವೆಲ್, ಪಡೀಲ್, ಅಡ್ಯಾರ್ ಬಸ್ ಮನವಿ. |
| 88. | ಶ್ರೀ.ದಿನೇಶ್ ಗುಂಡೂರಾವ್,<br>ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ದ.ಕ. ಜಿಲ್ಲಾ ಉಸ್ತುವಾರಿ ಸಚಿವರು. | 11-08-2025 | ಮಂಗಳೂರಿನಿಂದ ವಾಮಂಜೂರು, ಗುರುಪುರ, ಎಡಪದವು, ಕುಪ್ಪೆಪದವು, ಬೋಳಿಯ, ಮಾರ್ಗವಾಗಿ ಕನಿಷ್ಟ ನಾಲ್ಕು ಬಸ್ ಒದಗಿಸಬೇಕಾಗಿ ಮನವಿ. |
| 89. | ಶ್ರೀ. ಡಾ.ಭರತ್ ಶೆಟ್ಟಿ ವೈ,<br>ಮಾನ್ಯ ಶಾಸಕರು, ಮಂಗಳೂರು ನಗರ ಉತ್ತರ ವಿಧಾನಸಭಾ ಕ್ಷೇತ್ರ | 11-08-2025 | 1. ಸ್ಟೇಟ್ ಬ್ಯಾಂಕ್, ಲಾಲ್‌ಬಾಗ್, ಸುರತ್ಕಲ್, ಕಾನ, ಕೋಡಿಕೆರೆ, ಎಮ್.ಎಸ್.ಇ.ಝಿಡ್ ಕಾಲನಿ. 2. ಬಜಪೆ, ಜೋಕಟ್ಟೆ, ಬೈಕಂಪಾಡಿ, ಹೊನ್ನಕಟ್ಟೆ, ಮೂಡುಬೆಟ್ಟು, ಎಮ್.ಎಸ್.ಇ.ಝಿಡ್ ಕಾಲನಿ. ಗೆ 2 ಸರಕಾರಿ ಬಸ್ ವ್ಯವಸ್ಥೆ ಮನವಿ. |
| 90. | ಗ್ರಾಮಸ್ಥರು, ತಾರಿಗುಡ್ಡೆ, ಬೊಂಡಂತಿಲ, ಪಡು, ಮಲ್ಲೂರು, ಪೊಳಲಿ. | 18-08-2025 | ಮಂಗಳೂರು, ಜ್ಯೋತಿ, ವಾಮಂಜೂರು, ತಾರಿಗುಡ್ಡೆ, ಪೊಳಲಿ ಮಾರ್ಗಕ್ಕೆ ಬಸ್ ಮನವಿ. |
| 91. | ಶ್ರೀ. ಉಮಾನಾಥ್ ಕಾವೂರು, ಕುಂಜತ್ತ್ ಬೈಲ್, ಮಂಗಳೂರು. | 14-08-2025 | 1.ಕುಂಜತ್ತ್ ಬೈಲ್ -ಪಡೀಲ್ : ಕುಂಜತ್ತ್ ಬೈಲ್ ಕಾವೂರು ಬಿಜೈ ಲಾಲ್‌ಬಾಗ್ ಜ್ಯೋತಿ ರೈಲ್ವೆ ಜಂಕ್ಷನ್ ವಯಾ ಬಜಾಲ್ ಪಡೀಲ್. 2. ಕುಂಜತ್ತ್ ಬೈಲ್ -ಪಡೀಲ್ : ಕುಂಜತ್ತ್ ಬೈಲ್ ಕಾವೂರು ಕೂಳೂರು ಉರ್ವಸ್ಟೋರ್, ಲಾಲ್‌ಬಾಗ್ ಜ್ಯೋತಿ ಮಂಗಳೂರು ಜಂಕ್ಷನ್ ರೈಲ್ವೆ ವಯಾ ಬಜಾಲ್ ಪಡೀಲ್. 3. ಕುಂಜತ್ತ್ ಬೈಲ್ -ಪಡೀಲ್ : ಬೊಂದೇಲ್ ಕೆ.ಪಿ.ಟಿ. ಲಾಲ್ ಬಾಗ್, ಜ್ಯೋತಿ, ಮಂಗಳೂರು, ಜಂಕ್ಷನ್, ರೈಲ್ವೆ ವಯಾ ಬಜಾಲ್, ಪಡೀಲ್. 4. ಪಡೀಲ್,ಮರವೂರು ಕಾವೂರು ಬಜಪೆ, ಕೊಂಚಾಡಿ, ಲಾಲ್‌ಬಾಗ್, ಜ್ಯೋತಿ, ಮಂಗಳೂರು ಜಂಕ್ಷನ್ ರೈಲ್ವೆ ವಯಾ ಬಜಾಲ್ ಪಡೀಲ್. 5. ಕತ್ತಲ್ ಸಾರಾ- ಪಡೀಲ್ : ವಯಾ ಬಜಪೆ, ಮರವೂರು, ಕಾವೂರು, ಬೊಂದೆಲ್, ಕೆ.ಪಿ.ಟಿ. ಲಾಲ್‌ಬಾಗ್, ಜ್ಯೋತಿ, ಮಂಗಳೂರು ಜಂಕ್ಷನ್ ರೈಲ್ವೆ ಪಡೀಲ್ ಬಜಾಲ್. |
| 92. | ನಾಗರೀಕ ಹೋರಾಟ ಸಮಿತಿ ಕುಪ್ಪೆಪದವು ಮಂಗಳೂರು | 11-08-2025 | ಮಂಗಳೂರು ನಿಂದ ವಾಮಂಜೂರು, ಗುರುಪುರ, ಎಡಪದವು, ಕುಪ್ಪೆಪದವು, ಬೋಳಿಯ ರೂಟ್ ನಲ್ಲಿ ಕನಿಷ್ಠ ನಾಲ್ಕು ಬಸ್ ಒದಗಿಸಲು ಮನವಿ. |
| 93. | DR.Krishnappa Konchady, The Joint Convenor, Karnataka Adivasi, Hakkugala Samanvaya Samiti. | 21-08-2025 | ಸ್ಟೇಟ್ ಬ್ಯಾಂಕ್, ಬೊಂದೇಲ್, ಕೆ.ಪಿ.ಟಿ ಗೆ ಬಸ್ ಮನವಿ |
| 94. | DR.Krishnappa Konchady The Joint Convenor, Karnataka Adivasi, Hakkugala Samanvaya Samiti. | 23-08-2025 | 1. ಸ್ಟೇಟ್ ಬ್ಯಾಂಕ್-ಮಂಗಳೂರು ವಿಮಾನ ನಿಲ್ದಾನ, ಸ್ಟೇಟ್ ಬ್ಯಾಂಕ್ 2. ಮಣಿಪಾಲ- ಮಂಗಳೂರು ವಿಮಾನ ನಿಲ್ದಾನ, ಮಣಿಪಾಲ. |
| 95. | ಶ್ರೀ.ಹಿದಾಯತ್ತುಲ್ಲಾ ಅಬ್ದುಲ್ ಖಾದರ್, ಮಾಜಿ ಗ್ರಾಮ ಪಂಚಾಯತ್ ಸದಸ್ಯರು ರಾಯಿ. | 21-08-2025 | ಮಂಗಳೂರು ನಿಂದ ಮೂಲರಪಟ್ನ, ಬಿ.ಸಿ.ರೋಡ್ಗೆ ಬಸ್ ಮನವಿ |
| 96. | ನಾಗರಿಕರು ಮಲ್ಲಕಾಡಿ 4 ನೇ ಮೈಲುಕಲ್ಲು ಕಾವೂರು | 28-08-2025 | ಸ್ಟೇಟ್ ಬ್ಯಾಂಕ್ ನಿಂದ ಆನಂದನಗರ ವರೆಗೆ ಸರಕಾರಿ ಬಸ್ ಮನವಿ |

| | | | |
|---|---|---|---|
| 97. | ಶ್ರೀ. ಐವನ್ ಡಿಸೋಜಾ, ಮಾಜಿ ಶಾಸಕರು ಸರ್ಕಾರಿ ಮುಖ್ಯ ಸಚೇತಕರು ಕನಾಟಕ ಸರ್ಕಾರಿ | 04-09-2025 | ಬೆಂಗರೆ ಪ್ರದೇಶದ ನಾಗರಿಕರಿಗೆ ಕೆ.ಎಸ್.ಆರ್.ಟಿ.ಸಿ ಬಸ್ಸುಗಳ ಸೌಲಭ್ಯ ಒದಗಿಸುವ ಕುರಿತು. |
| 98. | ನಿತ್ಯ ಸಂಚಾರಿಗಳು | 10-09-2025 | ಮಂಗಳೂರು ನಿಂದ ಲಾಲ್ ಬಾಗ್, ಲೇಡಿಹಿಲ್, ಉರ್ವಸ್ಟೋರ್, ಕಾವೂರು, ಮೂಲಕ ಕಟೀಲಿಗೆ ಬಸ್ ಮನವಿ. |
| 99. | ಮಾನ್ಯ ಅಧ್ಯಕ್ಷರು ಮಂಗಳೂರು ತಾಲೂಕು ಮಟ್ಟದ ಗ್ಯಾರಂಟಿ ಅನುಷ್ಠಾನ ಸಮಿತಿ. | 08-09-2025 | 1. ಮಂಗಳೂರು ತಾಲೂಕಿನ ವಾಮಂಜೂರು, ಪರಾರಿ, ಉಳಾಯಿಬೆಟ್ಟು, ಕಾಂತರಬೆಟ್ಟು, ಸಂಕಮಾಡು ಮೂಡುಜೆಪ್ಪು ದೇವಸ್ಥಾನ ದವರೆಗೆ.<br>2. ಮಂಗಳೂರು, ನಂತುರು, ಕುಲಶೇಕರ, ವಾಮಂಜೂರು, ಕೈಕಂಬ, ಬಜ್ಪೆ ಮಾರ್ಗವಾಗಿ ಕಟೀಲು ವರೆಗೆ. 3. ಮಂಗಳೂರು ತಾಲೂಕಿನ ಸರಿಪಳ್ಳದಿಂದ, ಕನ್ನಗುಡ್ಡೆ ಮಾರ್ಗವಾಗಿ ಸ್ಟೇಟ್ ಬ್ಯಾಂಕ್. 4. ಸ್ಟೇಟ್ ಬ್ಯಾಂಕ್ ನಿಂದ ಬಜಪೆ, ಪೆರ್ಮುದೆ, ಎಕ್ಕಾರು ಮಾರ್ಗವಾಗಿ ಮತ್ತು ಕಟೀಲು ದೇವಸ್ಥಾನದ ವರೆಗೆ. |

**ಮಾನ್ಯ ಕರ್ನಾಟಕ ಸರಕಾರದ ಮಹಿಳಾ ಸಶಕ್ತೀಕರಣದ ಶಕ್ತಿ ಯೋಜನೆಯಲ್ಲಿ ಮಂಗಳೂರು ನಗರದ ವಿವಿಧ ಮಾರ್ಗಗಳಲ್ಲಿ ಸಂಚರಿಸಲು ಹೆಚ್ಚುತ್ತಿರುವ ಬೇಡಿಕೆ.**

ಅಕ್ಟೋಬರ್-2025 ನೇ ಮಾಹೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ಸುಗಳಲ್ಲಿ ಒಟ್ಟಾರೆ 1081.77 ಲಕ್ಷ ಪ್ರಯಾಣಿಕರು ಪ್ರಯಾಣಿಸಿದ್ದು ಇದರಲ್ಲಿ 745.74 ಲಕ್ಷ ಮಹಿಳಾ ಪ್ರಯಾಣಿಕರು ಘನ ಸರ್ಕಾರದ ಶಕ್ತಿಯೋಜನೆಯಲ್ಲಿ ಉಚಿತವಾಗಿ ಪ್ರಯಾಣಿಸಿರುತ್ತಾರೆ. ಒಟ್ಟಾರೆ ಪ್ರಯಾಣಿಸಿದ ಪ್ರಯಾಣಿಕರಲ್ಲಿ ಶೇಕಡಾವಾರು 68.94 ರಷ್ಟು ಮಹಿಳಾ ಪ್ರಯಾಣಿಕರು ಶಕ್ತಿ ಯೋಜನೆಯ ಸದುಪಯೋಗ ಪಡೆದುಕೊಂಡಿರುತ್ತಾರೆ.

ಅಕ್ಟೋಬರ್-2025 ನೇ ಮಾಹೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ಸುಗಳಲ್ಲಿ ಒಟ್ಟಾರೆ ಗಳಿಸಿದ ಸಾರಿಗೆ ಆದಾಯ ರೂ.50,120.02 ಲಕ್ಷಗಳಾಗಿದ್ದು, ಇದರಲ್ಲಿ ಪುರುಷ ಪ್ರಯಾಣಿಕರಿಂದ ಬಂದ ಸಾರಿಗೆ ಆದಾಯ ರೂ.23,403.66 ಲಕ್ಷಗಳಾಗಿದ್ದು , ಮಹಿಳಾ ಪ್ರಯಾಣಿಕರಿಂದ ರೂ.26,716.36 ಲಕ್ಷ ಸಾರಿಗೆ ಆದಾಯ ಮಹಿಳಾ ಪ್ರಯಾಣಿಕರ ಉಚಿತ ಪ್ರಯಾಣದ ಸಾರಿಗೆ ಆದಾಯವಾಗಿದ್ದು, ಶೇ.53% ರಷ್ಟು ಆದಾಯ ಘನ ಸರ್ಕಾರದ ಶಕ್ತಿಯೋಜನೆಯಲ್ಲಿ ಉಚಿತವಾಗಿ ಪ್ರಯಾಣಿಸಿದ ಮಹಿಳಾ ಪ್ರಯಾಣಿಕರಿಂದ ಗಳಿಸಿದ ಸಾರಿಗೆ ಆದಾಯವಾಗಿರುತ್ತದೆ.

ಮಂಗಳೂರು ವಿಭಾಗದಲ್ಲಿ ಮಂಗಳೂರಿನಲ್ಲಿ ಘಟಕ-1 ಮತ್ತು ಘಟಕ-3 ಹಾಗೂ ಉಡುಪಿ ಕುಂದಾಪುರ ಘಟಕಗಳಲ್ಲಿ ಕಾರ್ಯಾಚರಣೆಯಾಗುವ ಸಾರಿಗೆಗಳಲ್ಲಿ ಶಕ್ತಿ ಯೋಜನೆಯನ್ನು ಸದುಪಯೋಗಪಡಿಸಿಕೊಳ್ಳಲು ಮಹಿಳಾ ಪ್ರಯಾಣಿಕರಿಗೆ ಅವಕಾಶ ಕಲ್ಪಿಸಲಾಗಿರುತ್ತದೆ.

ಮಂಗಳೂರು ವಿಭಾಗದ ಬಸ್ಸುಗಳಲ್ಲಿ ಪ್ರಯಾಣಿಸಿರುವ ಒಟ್ಟು ಪ್ರಯಾಣಿಕರ ಸಂಖ್ಯೆ 51.62 ಲಕ್ಷಗಳಿದ್ದು ಇದರಲ್ಲಿ 31.10 ಲಕ್ಷ ಮಹಿಳಾ ಪ್ರಯಾಣಿಕರು ಘನ ಸರ್ಕಾರದ ಶಕ್ತಿಯೋಜನೆಯಲ್ಲಿ ಉಚಿತವಾಗಿ ಪ್ರಯಾಣಿಸಿರುತ್ತಾರೆ. ಒಟ್ಟಾರೆ ಪ್ರಯಾಣಿಸಿದ ಪ್ರಯಾಣಿಕರಲ್ಲಿ ಶೇಕಡಾವಾರು 60.02 ರಷ್ಟು ಮಹಿಳಾ ಪ್ರಯಾಣಿಕರು ಶಕ್ತಿ ಯೋಜನೆಯ ಸದುಪಯೋಗ ಪಡೆದುಕೊಂಡಿರುತ್ತಾರೆ.

ಅಕ್ಟೋಬರ್ -2025ನೇ ಮಾಹೆಯಲ್ಲಿ ಮಂಗಳೂರು ವಿಭಾಗದ ಬಸ್ಸುಗಳಲ್ಲಿ ಒಟ್ಟಾರೆ ಗಳಿಸಿದ ಸಾರಿಗೆ ಆದಾಯ ರೂ.3,548.65 ಲಕ್ಷಗಳಾಗಿದ್ದು , ಇದರಲ್ಲಿ ಪುರುಷ ಪ್ರಯಾಣಿಕರಿಂದ ಬಂದ ಸಾರಿಗೆ ಆದಾಯ ರೂ.1,301.51 ಲಕ್ಷ ಗಳಾಗಿದ್ದು, ಮಹಿಳಾ ಪ್ರಯಾಣಿಕರಿಂದ ರೂ.2,247.14 ಲಕ್ಷ ಸಾರಿಗೆ ಆದಾಯ ಮಹಿಳಾ ಪ್ರಯಾಣಿಕರ ಉಚಿತ ಪ್ರಯಾಣದ ಸಾರಿಗೆ ಆದಾಯವಾಗಿದ್ದು, ಶೇ.36.68 ರಷ್ಟು ಆದಾಯ ಘನ ಸರ್ಕಾರದ ಶಕ್ತಿಯೋಜನೆಯಲ್ಲಿ ಉಚಿತವಾಗಿ ಪ್ರಯಾಣಿಸಿದ ಮಹಿಳಾ ಪ್ರಯಾಣಿಕರಿಂದ ಗಳಿಸಿದ ಸಾರಿಗೆ ಆದಾಯವಾಗಿರುತ್ತದೆ. ಇದರಲ್ಲಿ ವಿಭಾಗದ ಕುಂದಾಪುರ ಮತ್ತು ಉಡುಪಿ ಘಟಕದ ವಾಹನಗಳಲ್ಲಿ ಪ್ರಯಾಣಿಸಿದ ಪ್ರಯಾಣಿಕರ ಹಾಗೂ ಗಳಿಸಿದ ಸಾರಿಗೆ ಆದಾಯವೂ ಒಳಗೊಂಡಿರುತ್ತದೆ.

ಮಂಗಳೂರು ನಗರ ವ್ಯಾಪ್ತಿಯಲ್ಲಿ ಕಾರ್ಯಾಚರಣೆಯಾಗುವ ನಗರ ಸಾರಿಗೆ ವಾಹನಗಳಲ್ಲಿ ಖಾಸಗಿ ನಗರ ಸಾರಿಗೆ ಪ್ರವರ್ತಕರ ವಾಹನಗಳು 321 ಇದ್ದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ , ಮಂಗಳೂರು ವಿಭಾಗದ ನಗರ ಸಾರಿಗೆ ವಾಹನಗಳು 43 ಇದ್ದು, ಒಟ್ಟಾರೆ ಮಂಗಳೂರು ನಗರ ಸಾರಿಗೆ ಕಾರ್ಯಾಚರಣೆಯ ಶೇಕಡಾವಾರು 13% ರಷ್ಟು ಮಾತ್ರ ಇರುತ್ತದೆ. ಮಂಗಳೂರು ನಗರದಲ್ಲಿ ಹೆಚ್ಚಿನ ಸಂಖ್ಯೆಯ ನಗರ ಸಾರಿಗೆ ಬಸ್ಸುಗಳು (ಶೇಕಡವಾರು 87% ರಷ್ಟು) ಖಾಸಗಿ ವಾಹನಗಳಾಗಿರುತ್ತವೆ.

ಕೆ.ಎಸ್.ಆರ್.ಟಿ.ಸಿ. ಯ ನಗರ ಸಾರಿಗೆ ಬಸ್ಸುಗಳಲ್ಲಿ ಅಕ್ಟೋಬರ್-2025 ರ ಮಾಹೆಯಲ್ಲಿ ಸುಮಾರು 12 ಲಕ್ಷ ಪ್ರಯಾಣಿಕರು ಪ್ರಯಾಣಿಸಿದ್ದು, ಇದರಲ್ಲಿ ಸುಮಾರು 6.5 ಲಕ್ಷ ಮಹಿಳಾ ಪ್ರಯಾಣಿಕರು ಶಕ್ತಿ ಯೋಜನೆಯ ಸದುಪಯೋಗವನ್ನು ಪಡೆದುಕೊಂಡಿದ್ದು, ಒಟ್ಟಾರೆ ಪ್ರಯಾಣಿಸಿದ ಪ್ರಯಾಣಿಕರ ಪೈಕಿ ಮಹಿಳಾ ಪ್ರಯಾಣಿಕರ ಶೇಕಡವಾರು 54 ರಷ್ಟು ಇರುತ್ತದೆ.

ಮಂಗಳೂರು ನಗರ ವ್ಯಾಪ್ತಿಯಲ್ಲಿ ಕಾರ್ಯಾಚರಣೆಯಾಗುವ ಖಾಸಗಿ ಪ್ರವರ್ತಕರ ಕಾರ್ಯಾಚರಣೆಗೆ ಕೆ.ಎಸ್.ಆರ್.ಟಿ.ಸಿ. ನಗರ ಸಾರಿಗೆಯನ್ನು ಹೋಲಿಸಿದಲ್ಲಿ ತುಂಬಾ ಕಡಿಮೆ ಪ್ರಮಾಣದಲ್ಲಿ ಶೇ.13% ರಷ್ಟು ಮಾತ್ರ ಕಾರ್ಯಾಚರಣೆಯಲ್ಲಿದ್ದು, ಸಾರ್ವಜನಿಕ ಪ್ರಯಾಣಿಕರು ಹಾಗೂ ಮಹಿಳಾ ಪ್ರಯಾಣೀಕರು ಸಾರಿಗೆ ಸೌಲಭ್ಯವನ್ನು ಮತ್ತು ಘನ ಸರ್ಕಾರದ ಶಕ್ತಿಯೋಜನೆಯ ಲಾಭ/ಸದುಪಯೋಗವನ್ನು ಪಡೆದುಕೊಳ್ಳಲು ಅವಕಾಶಗಳು ತುಂಬಾ ಕಡಿಮೆ ಇರುತ್ತದೆ. ಆದುದರಿಂದ ಘನ ಸರ್ಕಾರದ ಶಕ್ತಿಯೋಜನೆಯ ಸದುಪಯೋಗವನ್ನು ಪಡೆದುಕೊಳ್ಳಲು ಸಾರ್ವಜನಿಕರಿಂದ ಮತ್ತು ಚುನಾಯಿತ ಪ್ರತಿನಿಧಿಗಳಿಂದ ಹಲವಾರು ಮಾರ್ಗಗಳಲ್ಲಿ ಕೆ.ಎಸ್.ಆರ್.ಟಿ.ಸಿ. ನಗರ ಸಾರಿಗೆ ಸೌಲಭ್ಯಗಳನ್ನು ಸ್ಟೇಟ್ ಬ್ಯಾಂಕ್ ನಿಂದ ಕಲ್ಪಿಸುವಂತೆ ಬೇಡಿಕೆಗಳು ಬಂದಿರುತ್ತವೆ.

ಮುಂದುವರಿದು ಸಾರ್ವಜನಿಕ ಪ್ರಯಾಣಿಕರ ಹಾಗೂ ಮಹಿಳಾ ಪ್ರಯಾಣಿಕರಿಗೆ ಹೆಚ್ಚಿಗೆ ಸಾರಿಗೆ ಸೌಲಭ್ಯ ಮತ್ತು ಶಕ್ತಿಯೋಜನೆಯ ಲಾಭ/ಸದುಪಯೋಗವನ್ನು ಪಡೆದುಕೊಳ್ಳಲು ಇನ್ನೂ ಹೆಚ್ಚಿನ ಸಂಖ್ಯೆಯ ಕೆ.ಎಸ್.ಆರ್.ಟಿ.ಸಿ. ನಗರ ಸಾರಿಗೆಗಳನ್ನು ಪ್ರಾರಂಭಿಸುವ ಅವಶ್ಯಕತೆ ಇರುತ್ತದೆ.

**ವಿವಿಧ ಇಲಾಖೆಗಳು ಸಲ್ಲಿಸಿರುವ ವರದಿಯ ವಿಶ್ಲೇಷಣೆ:**

**1. <u>ಸಾರಿಗೆ ಇಲಾಖೆ:</u>**

ಸಾರಿಗೆ ಇಲಾಖೆಯವರು ನೀಡಿರುವ ವರದಿಯನ್ವಯ ಮಂಗಳೂರು ನಗರದಲ್ಲಿ ಸಂಚರಿಸುವ ನಗರ ಸಾರಿಗೆ ಬಸ್ಸುಗಳಲ್ಲಿ ಒಟ್ಟು 364 ಬಸ್ಸುಗಳಿದ್ದು, ಸದರಿ ಬಸ್ಸುಗಳಲ್ಲಿ ಖಾಸಗಿ ಬಸ್ಸುಗಳು 321 ಇದ್ದು ಮತ್ತು ಸರ್ಕಾರಿ ಸ್ವಾಮ್ಯದ ಬಸ್ಸುಗಳು 43 ಬಸ್ಸುಗಳಿರುತ್ತವೆ. ಮಂಗಳೂರು ಗ್ರಾಮಾಂತರ ಸಾರಿಗೆಯ ಬಸ್ಸುಗಳಲ್ಲಿ ಒಟ್ಟು 698 ಬಸ್ಸುಗಳಿದ್ದು, ಸದರಿ ಬಸ್ಸುಗಳಲ್ಲಿ ಖಾಸಗಿ ಬಸ್ಸುಗಳು 658 ಇದ್ದು ಮತ್ತು ಸರ್ಕಾರಿ ಸ್ವಾಮ್ಯದ ಬಸ್ಸುಗಳು 40 ಬಸ್ಸುಗಳಿರುತ್ತವೆ .

ಮುಂದುವರೆದು, 1991 ಮತ್ತು 1993 ರ ಜಿಲ್ಲಾಧಿಕಾರಿಯವರ ಅಧಿಸೂಚನೆಯಂತೆ ಮಂಗಳೂರು ನಗರಕ್ಕೆ ವಿವಿಧ ಮಾರ್ಗಗಳಿಂದ ಆಗಮಿಸುವ ಬಸ್ಸುಗಳಿಗೆ ನಗರದ ವಿವಿಧ ಟರ್ಮಿನಲ್ ನಿಲುಗಡೆ ಸ್ಥಾನಗಳಾದ ಮಲ್ಲಿಕಟ್ಟೆ, ಕೆ.ಪಿ.ಟಿ., ಕಂಕನಾಡಿ, ಕೊಟ್ಟಾರ ಚೌಕಿ ಹಾಗೂ ಉರ್ವ ಸ್ಟೋರ್‌ನಲ್ಲಿ ಪ್ರಯಾಣವನ್ನು ಸ್ಥಗಿತಗೊಳಿಸಬೇಕಾಗಿರುವುದರಿಂದ ಸದರಿ ನಿಲುಗಡೆ ಸ್ಥಳಗಳಿಂದ ನಗರದ ಕೇಂದ್ರ ಭಾಗಕ್ಕೆ ತೆರಳಲು ಸದರಿ ಸ್ಥಳಗಳಿಂದ ಬೇರೆ ಬಸ್ಸುಗಳಲ್ಲಿ/ಆಟೋಗಳಲ್ಲಿ ಪ್ರಯಾಣಿಸಬೇಕಾಗಿರುತ್ತದೆ. ಸದರಿ ಹೆಚ್ಚುವರಿ ಪ್ರಯಾಣದಿಂದ ಪ್ರಯಾಣಿಕರು ಹೆಚ್ಚುವರಿಯಾಗಿ ಟಿಕೇಟ್ ದರವನ್ನು ಪಾವತಿಸಬೇಕಾಗಿರುತ್ತದೆ. ಇದರಿಂದ ಗ್ರಾಮಾಂತರ ಪ್ರದೇಶದಿಂದ ನಗರಕ್ಕೆ ಆಗಮಿಸುವ ಪ್ರಯಾಣಿಕರಿಗೆ ಪ್ರಯಾಣದ ತೊಂದರೆ ಹಾಗೂ ಹೆಚ್ಚುವರಿ ಟಿಕೇಟ್ ದರದ ಹೊರೆ ಉಂಟಾಗುತ್ತಿರುತ್ತದೆ.

**2. <u>ಪೊಲೀಸ್ ಇಲಾಖೆ:</u>**

ಪೊಲೀಸ್ ಆಯುಕ್ತರು ಮಂಗಳೂರು ರವರ ಪತ್ರದಲ್ಲಿ ವಿವರಿಸಿದಂತೆ ಮಂಗಳೂರು ನಗರದ ಸ್ಟೇಟ್‌ಬ್ಯಾಂಕ್ ಬಸ್ಸು ನಿಲ್ದಾಣವನ್ನು ಸುತ್ತಮುತ್ತಲಿನಲ್ಲಿರುವ ವಿವಿಧ ಇಲಾಖೆಯ ಸರ್ಕಾರಿ ಇಲಾಖೆಯ ಕಟ್ಟಡಗಳು, ಕೇಂದ್ರ ಮಾರುಕಟ್ಟೆ, ಮೀನಿನ ಮಾರ್ಕೆಟ್, ನಗರದ ಪ್ರತಿಷ್ಟಿತ ಮಾಲ್ ಗಳು, ವಾಣಿಜ್ಯ ಸಂಕೀರ್ಣಗಳು, ವ್ಯಾಪಾರ ಕೇಂದ್ರಗಳು, ಸರ್ಕಾರಿ ಆಸ್ಪತ್ರೆಗಳಿಗೆ ಬರುವ ಹಾಗೂ ಹೋಗುವ ಸಾರ್ವಜನಿಕರು ಉಪಯೋಗಿಸುತ್ತಿರುವುದಾಗಿದೆ. ಈ ಪ್ರದೇಶವು ಗರಿಷ್ಟವಾಗಿ ಎಲ್ಲಾ ಸೌಲಭ್ಯವನ್ನು

ಹೊಂದಿರುವ ನಗರದ ಕೇಂದ್ರೀಕೃತ ಪ್ರದೇಶವಾಗಿರುವುದರಿಂದ ಜಿಲ್ಲೆಯ ವಿವಿಧ ಭಾಗಗಳಿಂದ ಹಾಗೂ ಹೊರ ಜಿಲ್ಲೆ/ರಾಜ್ಯಗಳಿಂದ ಸಾರ್ವಜನಿಕರು ಈ ಪ್ರದೇಶವನ್ನು ಅವಲಂಬಿಸಿರುತ್ತಾರೆ.

ಸಾರ್ವಜನಿಕರು ಸಾರ್ವಜನಿಕರ ಸಾರಿಗೆ ಬಸ್ಸುಗಳ ಬದಲಾಗಿ ತಮ್ಮ ಸ್ವಂತ ಖಾಸಗಿ ವಾಹನಗಳನ್ನು ಉಪಯೋಗಿಸಲು ಒಲವನ್ನು ತೋರುತ್ತಿರುವುದಾಗಿದೆ. ಇದರಿಂದ ನಗರದ ಒಳಭಾಗದಲ್ಲಿ ಪೀಕ್ ಅವರ್ಸ್‌ಗಳಲ್ಲಿ ನಗರದ ಪ್ರಮುಖ ರಸ್ತೆ ಮತ್ತು ಜಂಕ್ಷನ್ ಗಳಲ್ಲಿ ವಿಪರೀತ ಸಂಚಾರ ದಟ್ಟನೆ ಉಂಟಾಗುತ್ತಿರುವುದಾಗಿದೆ.

ಸಾಮಾನ್ಯವಾಗಿ ಪ್ರಸ್ತುತ ಸಾರ್ವಜನಿಕರ ಸಾರಿಗೆ ವಾಹನವನ್ನು ಅವಲೋಕಿಸಿದಲ್ಲಿ ನಗರದ ಒಳಭಾಗ ಸಂಚಾರ ದಟ್ಟಣೆ ಹೆಚ್ಚುತ್ತಿದ್ದು, ಸಾರ್ವಜನಿಕರು ಪ್ರಯಾಣಿಸಲು ಸಾರಿಗೆ ಇಲಾಖೆಯ ಬಸ್ಸುಗಳನ್ನು ಹೆಚ್ಚಿಸಿದಲ್ಲಿ, ಹಾಲಿ ಉಪಯೋಗಿಸುತ್ತಿರುವ ಕಾರು ಮತ್ತು ದ್ವಿ-ಚಕ್ರ ವಾಹನಗಳ ಉಪಯೋಗಿಸದೇ ಸದ್ರಿ ಸಾರಿಗೆ ಬಸ್ಸುಗಳಲ್ಲಿ ಪ್ರಯಾಣಿಸಿದಾಗ ಸಂಚಾರ ದಟ್ಟಣೆ ಕಡಿಮೆಯಾಗುತ್ತದೆ ಮತ್ತು ಅನುಕೂಲವಾಗುತ್ತದೆ.

ಪ್ರಸ್ತುತ ಚಾಲ್ತಿಯಲ್ಲಿರುವ ಮಾನ್ಯ ಜಿಲ್ಲಾಧಿಕಾರಿಯವರ ಅಧಿಸೂಚನೆಯಂತೆ ಹೆಚ್ಚುವರಿ ಬಸ್ಸುಗಳು ನಗರಕ್ಕೆ ಬರುವುದನ್ನು ನಿರ್ಬಂಧಿಸಿದಂತಾಗಿರುವುದರಿಂದ ಜನಸಂಖ್ಯೆಯಲ್ಲಿ ಏರಿಕೆಯಾಗಿದ್ದರೂ, ನಗರದ ಒಳಗಡೆ ಬರುವ ಬಸ್ಸುಗಳು ಅದೇ ಆಗಿದ್ದು, ಸಾರ್ವಜನಿಕರ ಬೇಡಿಕೆಯ ಅನುಗುಣವಾಗಿ ಬಸ್ಸುಗಳ ಅಭಾವವಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

ಸಾಮಾನ್ಯವಾಗಿ ಸಾರ್ವಜನಿಕ ಸಾರಿಗೆ ಬಸ್ಸುಗಳಲ್ಲಿ ಒಂದು ಬಾರಿಗೆ 35 ರಿಂದ 50 ಪ್ರಯಾಣಿಕರು ಪ್ರಯಾಣಿಸುವುದರಿಂದ ಸಾರ್ವಜನಿಕರು ತಮ್ಮ ದೈನಂದಿನ ಕೆಲಸ ಕಾರ್ಯಗಳಿಗೆ ಬಳಕೆಯ ವಾಹನಗಳಾದ 8 ರಿಂದ 12 ಮೋಟಾರು ಕಾರು, ದ್ವಿ-ಚಕ್ರ ವಾಹನಗಳ ಸಂಚಾರವನ್ನು ಕಡಿಮೆಗೊಳಿಸಬಹುದು. ದ್ವಿ-ಚಕ್ರ ವಾಹನ ದಟ್ಟಣೆಯನ್ನು ಕಡಿಮೆಗೊಳಿಸಲು ಅನುಕೂಲವಾಗುತ್ತದೆ. ಅದೇ ರೀತಿ ನಗರದಲ್ಲಿ ಉದ್ಭವಿಸುವ ವಾಹನ ಪಾರ್ಕಿಂಗ್ ಸಮಸ್ಯೆಯನ್ನು ಪರಿಹರಿಸಬಹುದಾಗಿದೆ.

ಆದುದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ಸಾರ್ವಜನಿಕರ ಬೇಡಿಕೆಯ ಅನುಗುಣವಾಗಿ ಸಾರ್ವಜನಿಕ ಸಾರಿಗೆ ಬಸ್ಸುಗಳು ನಗರದ ಒಳಗಡೆ ಪ್ರವೇಶಿಸಲು ಅನುವು ಮಾಡಿಕೊಡಬೇಕಾಗಿರುತ್ತದೆ ಎಂಬ ಅಂಶವು ಕಂಡುಬಂದಿರುತ್ತದೆ.

**3. <u>ಮಂಗಳೂರು ಮಹಾನಗರ ಪಾಲಿಕೆ :</u>**

ಆಯುಕ್ತರು, ಮಂಗಳೂರು ಮಹಾನಗರ ಪಾಲಿಕೆ , ಮಂಗಳೂರು ರವರ ಪತ್ರದಲ್ಲಿರುವ ಅಂಶಗಳನ್ವಯ ರಲ್ಲಿ1991 ರ ರಾಷ್ಟ್ರೀಯ ಜನಗಣತಿಯ ಆಧಾರದಲ್ಲಿ ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ನಗರ ಜನಸಂಖ್ಯೆ: 273304 ಎಂದಾಗಿರುತ್ತದೆ. 2011 ರ ರಾಷ್ಟ್ರೀಯ ಜನಗಣತಿಯ ಆಧಾರದಲ್ಲಿ ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ನಗರ ಜನಸಂಖ್ಯೆ:488968 ಎಂದಾಗಿರುತ್ತದೆ ನಂತರ 2021 ರಲ್ಲಿ ಪೂರ್ಣಗೊಳ್ಳಬೇಕಾಗಿದ್ದ ಜನಗಣತಿ ಕಾರಣಾಂತರಗಳಿಂದ ಮುಂದೂಡಲಾಗಿದ್ದು, ಅಧಿಕೃತ ಜನಸಂಖ್ಯೆ ಲಭ್ಯವಾಗಿರುವುದಿಲ್ಲ. 2025 ನೇ ಇಸವಿಗೆ ಅಂದಾಜಿಸಲಾದಂತೆ, ಮಂಗಳೂರು ನಗರದ ಜನಸಂಖ್ಯೆ: 5,97,824 ಇರುವುದಾಗಿ ಹಾಗೂ 2011 ರ ರಾಷ್ಟ್ರೀಯ ಜನಗಣತಿಯ ಆಧಾರದಲ್ಲಿ ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಮಹಿಳೆಯರ ಸಂಖ್ಯೆ 2,46,456 ಆಗಿರುತ್ತದೆ.

**4. <u>ಆರೋಗ್ಯ ಇಲಾಖೆ:</u>**

ಆರೋಗ್ಯ ಇಲಾಖೆಯ ವರದಿಯನ್ವಯ ಮಂಗಳೂರು ನಗರದ ಕೇಂದ್ರ ಭಾಗದಲ್ಲಿರುವ ಸರಕಾರಿ ಆಸ್ಪತ್ರೆಗಳಾದ ಲೇಡಿಗೋಷನ್ ಮತ್ತು ವೆನ್‌ಲಾಕ್ ಆಸ್ಪತ್ರೆಗೆ ಮಂಗಳೂರು ಜಿಲ್ಲೆಯ ವಿವಿಧ ಭಾಗಗಳಿಂದ ಹಾಗೂ ಅಕ್ಕ ಪಕ್ಕ ಜಿಲ್ಲೆಗಳಿಂದ ಪ್ರತಿನಿತ್ಯ 2,934 ರೋಗಿಗಳು ದಾಖಲಾಗುತ್ತಾರೆ. ಇದರಲ್ಲಿ ಪ್ರಮುಖವಾಗಿ ಮಹಿಳೆಯರಿಗಾಗಿಯೇ ಮೀಸಲಾಗಿರುವ ಲೇಡಿಗೋಷನ್ ಆಸ್ಪತ್ರೆಗೆ ದಿನನಿತ್ಯ 560 ರೋಗಿಗಳು ದಾಖಲಾಗುತ್ತಾರೆ. ಹಾಗೂ ಸದರಿ ರೋಗಿಗಳ ಜೊತೆಗೆ ಅಂದಾಜು 2700 ಅವರ ಕುಟುಂಬಸ್ಥರು ಕೂಡಾ ಆಸ್ಪತ್ರೆಗೆ ಭೇಟಿ ಕೊಡುತ್ತಾರೆ. ಸದರಿ ರೋಗಿಗಳಲ್ಲಿ ಹೆಚ್ಚಿನವರು ಆರ್ಥಿಕವಾಗಿ ಹಿಂದುಳಿದ ಕೆಳವರ್ಗ ಮತ್ತು ಮಧ್ಯಮ ವರ್ಗದವರಾಗಿರುತ್ತಾರೆ. ಆರ್ಥಿಕವಾಗಿ ಹಿಂದುಳಿದವರಿಗೆ ಹಾಗೂ ವಿಶೇಷವಾಗಿ

ಮಹಿಳೆಯರಿಗೆ ಘನ ಸರ್ಕಾರದ ಶಕ್ತಿ ಯೋಜನೆಯ ಸವಲತ್ತುಗಳನ್ನು ಒದಗಿಸಲು, ಅಂಗವಿಕಲರಿಗೆ, ವಯೋವೃದ್ದರಿಗೆ ಅನುಕೂಲವಾಗಲು ನಗರದ ಕೇಂದ್ರ ಭಾಗಕ್ಕೆ ಸರ್ಕಾರಿ ಸಾರಿಗೆ ವ್ಯವಸ್ಥೆಯನ್ನು ಮಾಡಲು ಈ ಹಿಂದೆ ಹೊರಡಿಸಿರುವ ಅಧಿಸೂಚನೆಯನ್ನು ಹಿಂಪಡೆಯಬೇಕಾಗಿರುತ್ತದೆ.

**5. <u>ಶಿಕ್ಷಣ ಇಲಾಖೆ:</u>**

ಮಂಗಳೂರು ನಗರದ ವ್ಯಾಪ್ತಿಯಲ್ಲಿ ಶಿಕ್ಷಣ ಇಲಾಖೆಯ ವಿವಿಧ ಹಂತಗಳಾದ ಪ್ರಾಥಮಿಕ ಮತ್ತು ಮಾಧ್ಯಮಿಕ ಹಾಗೂ ಪ್ರೌಢಶಾಲೆಯಲ್ಲಿ ಒಟ್ಟು 75,951 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಪದವಿ ಪೂರ್ವ ಕಾಲೇಜುಗಳಲ್ಲಿ ಒಟ್ಟು 30,593 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ನಗರದ ವಿವಿಧ ಕಾಲೇಜುಗಳಲ್ಲಿ ಒಟ್ಟು 17,958 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಸದರಿ ವಿದ್ಯಾರ್ಥಿಗಳಿಗೆ ರಿಯಾಯಿತಿ ದರದಲ್ಲಿ ವಾರ್ಷಿಕ ಪಾಸುಗಳನ್ನು ಹಾಗೂ ಸೂಕ್ತ ಮತ್ತು ಸಮರ್ಪಕವಾದ ಸರ್ಕಾರಿ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಬೇಕಾಗಿರುತ್ತದೆ.

**6. <u>ರೈಲ್ವೇ ಇಲಾಖೆ:</u>**

ಮಂಗಳೂರು ಕೇಂದ್ರ ರೈಲ್ವೇ ನಿಲ್ದಾಣವು ಮಂಗಳೂರು ನಗರದ ಕೇಂದ್ರ ಭಾಗದಲ್ಲಿದ್ದು ಸದರಿ ನಿಲ್ದಾಣಕ್ಕೆ ಪ್ರತಿನಿತ್ಯ 15117 ಪ್ರಯಾಣಿಕರು ಆಗಮಿಸುತ್ತಿದ್ದು ಹಾಗೂ ನಿರ್ಗಮಿಸುತ್ತಿರುತ್ತಾರೆ. ಸದರಿ ರೈಲ್ವೇ ನಿಲ್ದಾಣದಿಂದ ಹಾಗೂ ರೇಲ್ವೇ ನಿಲ್ದಾಣಕ್ಕೆ ಆಟೋಗಳ ಮುಖಾಂತರ ನಗರದ ವಿವಿಧ ಭಾಗಗಳಿಗೆ ಸಂಚರಿಸಬೇಕಾದರೆ ಹಾಗೂ ನಗರದ ವಿವಿಧ ಭಾಗಗಳಿಂದ ಆಗಮಿಸಬೇಕಾದರೆ ಹೆಚ್ಚಿನ ದರವನ್ನು ಆಟೋಗಳಿಗೆ ಪಾವತಿಸಬೇಕಾಗಿರುತ್ತದೆ. ಸದರಿ ನಿಲ್ದಾಣದಿಂದ ಬಸ್ಸುಗಳ ವ್ಯವಸ್ಥೆಗಾಗಿ ನಗರದ ವಿವಿಧ ಸಂಘಟನೆಗಳು, ಜನಪ್ರತಿನಿಧಿಗಳಿಂದ ಬೇಡಿಕೆಗಳು ಬಂದಿರುತ್ತವೆ. ಆದ್ದರಿಂದ ಸದರಿ ನಿಲ್ದಾಣದಿಂದ ಬಸ್ಸುಗಳ ವ್ಯವಸ್ಥೆಯನ್ನು ಮಾಡಿದ್ದಲ್ಲಿ ರೈಲುಗಳ ಮುಖಾಂತರ ನಗರಕ್ಕೆ ಆಗಮಿಸುವ ಮತ್ತು ನಿರ್ಗಮಿಸುವ ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲವಾಗುತ್ತದೆ.

**7. <u>ಜಿಲ್ಲಾ ಪಂಚಾಯತ್ :</u>**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ ಜಿಲ್ಲೆ ರವರ ಪತ್ರದಲ್ಲಿರುವ ಅಂಶಗಳನ್ವಯ ಸದರಿಯವರ ಕಛೇರಿಯಲ್ಲಿ ನಡೆದ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಯ ಪ್ರಗತಿ ಪರಿಶೀಲನಾ ಸಭೆಯ ನಡವಳಿಯಲ್ಲಿ ಉಲ್ಲೇಖಿಸಿದಂತೆ ಪಂಚ ಗ್ಯಾರಂಟಿ ಯೋಜನೆಯಲ್ಲಿ ಒಂದಾದ ಶಕ್ತಿ ಯೋಜನೆಯಡಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ಸುಗಳನ್ನು ಮಂಗಳೂರು ನಗರ ಪ್ರದೇಶಗಳ ವ್ಯಾಪ್ತಿಯಲ್ಲಿ ಚಲಾಯಿಸಲು ಬಹು ಬೇಡಿಕೆಯಿದ್ದು, ಬಸ್ಸುಗಳಿಗೆ ಪರವಾನಿಗೆಯನ್ನು ನೀಡಲು ಜಿಲ್ಲಾದಂಡಾಧಿಕಾರಿಯವರ ಅಧಿಸೂಚನೆ ಅಡ್ಡಿಯಾಗಿದ್ದು ಸದರಿ ಅಧಿಸೂಚನೆಯಿಂದ ಕ.ರಾ.ಸಾನಿಗಮದ ಪರವಾನಿಗೆ ವಿನಾಯತಿ ನೀಡಲು ಕೋರಿರುತ್ತಾರೆ. ಸದರಿ ಅಧಿಸೂಚನೆಯಿಂದ ವಿನಾಯಿತಿ ನೀಡಿದರೆ ಮಂಗಳೂರು ಕೇಂದ್ರ ಭಾಗದಿಂದ ಬಸ್ಸಗಳ ಸಂಚಾರವನ್ನು ಪ್ರಾರಂಭಿಸಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಪ್ರಯಾಣಿಕರಿಗೆ ಶಕ್ತಿ ಯೋಜನೆಯ ಸದುಪಯೋಗ ಪಡೆದುಕೊಳ್ಳುವಂತೆ ಮಾಡಬಹುದಾಗಿರುತ್ತದೆ ಎಂದು ವಿವರಿಸಿರುತ್ತಾರೆ.

**8. <u>ಕೆ.ಎಸ್.ಆರ್.ಟಿ.ಸಿ.:</u>**

ಕೆ.ಎಸ್.ಆರ್.ಟಿ.ಸಿ. ರವರು ಸಲ್ಲಿಸಿದ ವರದಿಯಲ್ಲಿ ಅಕ್ಟೋಬರ್-2025 ನೇ ಮಾಹೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ಸುಗಳಲ್ಲಿ ಒಟ್ಟಾರೆ ರೂ.1,081.77 ಲಕ್ಷ ಪ್ರಯಾಣಿಕರು ಪ್ರಯಾಣಿಸಿದ್ದು ಇದರಲ್ಲಿ 745.74 ಲಕ್ಷ ಮಹಿಳಾ ಪ್ರಯಾಣಿಕರು ಘನ ಸರ್ಕಾರದ ಶಕ್ತಿಯೋಜನೆಯಲ್ಲಿ ಉಚಿತವಾಗಿ ಪ್ರಯಾಣಿಸಿರುತ್ತಾರೆ. ಒಟ್ಟಾರೆ ಪ್ರಯಾಣಿಸಿದ ಪ್ರಯಾಣಿಕರಲ್ಲಿ ಶೇಕಡಾವಾರು 68.94% ರಷ್ಟು ಮಹಿಳಾ ಪ್ರಯಾಣಿಕರು ಶಕ್ತಿ ಯೋಜನೆಯ ಸದುಪಯೋಗ ಪಡೆದುಕೊಂಡಿರುತ್ತಾರೆ.

ಅಕ್ಟೋಬರ್-2025 ನೇ ಮಾಹೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ಸುಗಳಲ್ಲಿ ಒಟ್ಟಾರೆ ಗಳಿಸಿದ ಸಾರಿಗೆ ಆದಾಯ ರೂ.50,120.02 ಲಕ್ಷಗಳಾಗಿದ್ದು, ಇದರಲ್ಲಿ ಪುರುಷ ಪ್ರಯಾಣಿಕರಿಂದ ಬಂದ ಸಾರಿಗೆ ಆದಾಯ ರೂ.23,403.66 ಲಕ್ಷಗಳಾಗಿದ್ದು , ಮಹಿಳಾ ಪ್ರಯಾಣಿಕರಿಂದ ರೂ.26,716.36 ಲಕ್ಷ ಸಾರಿಗೆ ಆದಾಯ ಮಹಿಳಾ ಪ್ರಯಾಣಿಕರ ಉಚಿತ ಪ್ರಯಾಣದ ಸಾರಿಗೆ ಆದಾಯವಾಗಿದ್ದು, ಶೇ.53%

ರಷ್ಟು ಆದಾಯ ಘನ ಸರ್ಕಾರದ ಶಕ್ತಿಯೋಜನೆಯಲ್ಲಿ ಉಚಿತವಾಗಿ ಪ್ರಯಾಣಿಸಿದ ಮಹಿಳಾ ಪ್ರಯಾಣಿಕರಿಂದ ಗಳಿಸಿದ ಸಾರಿಗೆ ಆದಾಯವಾಗಿರುತ್ತದೆ.

ಮಂಗಳೂರು ವಿಭಾಗದಲ್ಲಿ ಮಂಗಳೂರಿನಲ್ಲಿ ಘಟಕ-1 ಮತ್ತು ಘಟಕ-3 ಹಾಗೂ ಉಡುಪಿ ಕುಂದಾಪುರ ಘಟಕಗಳಲ್ಲಿ ಕಾರ್ಯಾಚರಣೆಯಾಗುವ ಸಾರಿಗೆಗಳಲ್ಲಿ ಶಕ್ತಿ ಯೋಜನೆಯನ್ನು ಸದುಪಯೋಗಪಡಿಸಿಕೊಳ್ಳಲು ಮಹಿಳಾ ಪ್ರಯಾಣಿಕರಿಗೆ ಅವಕಾಶ ಕಲ್ಪಿಸಲಾಗಿರುತ್ತದೆ.

ಮಂಗಳೂರು ವಿಭಾಗದ ಬಸ್ಸುಗಳಲ್ಲಿ ಪ್ರಯಾಣಿಸಿರುವ ಒಟ್ಟು ಪ್ರಯಾಣಿಕರ ಸಂಖ್ಯೆ 51.62 ಲಕ್ಷಗಳಿದ್ದು , ಇದರಲ್ಲಿ 31.10 ಲಕ್ಷ ಮಹಿಳಾ ಪ್ರಯಾಣಿಕರು ಘನ ಸರ್ಕಾರದ ಶಕ್ತಿಯೋಜನೆಯಲ್ಲಿ ಉಚಿತವಾಗಿ ಪ್ರಯಾಣಿಸಿರುತ್ತಾರೆ. ಒಟ್ಟಾರೆ ಪ್ರಯಾಣಿಸಿದ ಪ್ರಯಾಣಿಕರಲ್ಲಿ ಶೇಕಡಾವಾರು 60.02 ರಷ್ಟು ಮಹಿಳಾ ಪ್ರಯಾಣಿಕರು ಶಕ್ತಿ ಯೋಜನೆಯ ಸದುಪಯೋಗ ಪಡೆದುಕೊಂಡಿರುತ್ತಾರೆ.

ಅಕ್ಟೋಬರ್ -2025ನೇ ಮಾಹೆಯಲ್ಲಿ ಮಂಗಳೂರು ವಿಭಾಗದ ಬಸ್ಸುಗಳಲ್ಲಿ ಒಟ್ಟಾರೆ ಗಳಿಸಿದ ಸಾರಿಗೆ ಆದಾಯ ರೂ.3,548.65 ಲಕ್ಷಗಳಾಗಿದ್ದು , ಇದರಲ್ಲಿ ಪುರುಷ ಪ್ರಯಾಣಿಕರಿಂದ ಬಂದ ಸಾರಿಗೆ ಆದಾಯ ರೂ.1,301.51 ಲಕ್ಷ ಗಳಾಗಿದ್ದು, ಮಹಿಳಾ ಪ್ರಯಾಣಿಕರಿಂದ ರೂ.2,247.14 ಲಕ್ಷ ಸಾರಿಗೆ ಆದಾಯ ಮಹಿಳಾ ಪ್ರಯಾಣಿಕರ ಉಚಿತ ಪ್ರಯಾಣದ ಸಾರಿಗೆ ಆದಾಯವಾಗಿದ್ದು, ಶೇ.36.68 ರಷ್ಟು ಆದಾಯ ಘನ ಸರ್ಕಾರದ ಶಕ್ತಿಯೋಜನೆಯಲ್ಲಿ ಉಚಿತವಾಗಿ ಪ್ರಯಾಣಿಸಿದ ಮಹಿಳಾ ಪ್ರಯಾಣಿಕರಿಂದ ಗಳಿಸಿದ ಸಾರಿಗೆ ಆದಾಯವಾಗಿರುತ್ತದೆ. ಇದರಲ್ಲಿ ವಿಭಾಗದ ಕುಂದಾಪುರ ಮತ್ತು ಉಡುಪಿ ಘಟಕದ ವಾಹನಗಳಲ್ಲಿ ಪ್ರಯಾಣಿಸಿದ ಪ್ರಯಾಣಿಕರ ಹಾಗೂ ಗಳಿಸಿದ ಸಾರಿಗೆ ಆದಾಯವೂ ಒಳಗೊಂಡಿರುತ್ತದೆ.

ಮಂಗಳೂರು ನಗರ ವ್ಯಾಪ್ತಿಯಲ್ಲಿ ಕಾರ್ಯಾಚರಣೆಯಾಗುವ ನಗರ ಸಾರಿಗೆ ವಾಹನಗಳಲ್ಲಿ ಖಾಸಗಿ ನಗರ ಸಾರಿಗೆ ಪ್ರವರ್ತಕರ ವಾಹನಗಳು 321 ಇದ್ದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ , ಮಂಗಳೂರು ವಿಭಾಗದ ನಗರ ಸಾರಿಗೆ ವಾಹನಗಳು 43 ಇದ್ದು, ಒಟ್ಟಾರೆ ಮಂಗಳೂರು ನಗರ ಸಾರಿಗೆ ಕಾರ್ಯಾಚರಣೆಯ ಶೇಕಡಾವಾರು 13% ರಷ್ಟು ಮಾತ್ರ ಇರುತ್ತದೆ. ಮಂಗಳೂರು ನಗರದಲ್ಲಿ ಹೆಚ್ಚಿನ ಸಂಖ್ಯೆಯ ನಗರ ಸಾರಿಗೆ ಬಸ್ಸುಗಳು (ಶೇಕಡವಾರು 87% ರಷ್ಟು) ಖಾಸಗಿ ವಾಹನಗಳಾಗಿರುತ್ತವೆ.

ಕೆ.ಎಸ್.ಆರ್.ಟಿ.ಸಿ. ಯ ನಗರ ಸಾರಿಗೆ ಬಸ್ಸುಗಳಲ್ಲಿ ಅಕ್ಟೋಬರ್-2025 ರ ಮಾಹೆಯಲ್ಲಿ ಸುಮಾರು 12 ಲಕ್ಷ ಪ್ರಯಾಣಿಕರು ಪ್ರಯಾಣಿಸಿದ್ದು, ಇದರಲ್ಲಿ ಸುಮಾರು 6.5 ಲಕ್ಷ ಮಹಿಳಾ ಪ್ರಯಾಣಿಕರು ಶಕ್ತಿ ಯೋಜನೆಯ ಸದುಪಯೋಗವನ್ನು ಪಡೆದುಕೊಂಡಿದ್ದು, ಒಟ್ಟಾರೆ ಪ್ರಯಾಣಿಸಿದ ಪ್ರಯಾಣಿಕರ ಪೈಕಿ ಮಹಿಳಾ ಪ್ರಯಾಣಿಕರ ಶೇಕಡವಾರು 54 ರಷ್ಟು ಇರುತ್ತದೆ.

ಮಂಗಳೂರು ನಗರ ವ್ಯಾಪ್ತಿಯಲ್ಲಿ ಕಾರ್ಯಾಚರಣೆಯಾಗುವ ಖಾಸಗಿ ಪ್ರವರ್ತಕರ ಕಾರ್ಯಾಚರಣೆಗೆ ಕೆ.ಎಸ್.ಆರ್.ಟಿ.ಸಿ. ನಗರ ಸಾರಿಗೆಯನ್ನು ಹೋಲಿಸಿದಲ್ಲಿ ತುಂಬಾ ಕಡಿಮೆ ಪ್ರಯಾಣದಲ್ಲಿ ಶೇ.13% ರಷ್ಟು ಮಾತ್ರ ಕಾರ್ಯಾಚರಣೆಯಲ್ಲಿದ್ದು, ಸಾರ್ವಜನಿಕ ಪ್ರಯಾಣಿಕರು ಹಾಗೂ ಮಹಿಳಾ ಪ್ರಯಾಣೀಕರು ಸಾರಿಗೆ ಸೌಲಭ್ಯವನ್ನು ಮತ್ತು ಘನ ಸರ್ಕಾರದ ಶಕ್ತಿಯೋಜನೆಯ ಲಾಭ/ಸದುಪಯೋಗವನ್ನು ಪಡೆದುಕೊಳ್ಳಲು ಅವಕಾಶಗಳು ತುಂಬಾ ಕಡಿಮೆ ಇರುತ್ತದೆ. ಆದುದರಿಂದ ಘನ ಸರ್ಕಾರದ ಶಕ್ತಿಯೋಜನೆಯ ಸದುಪಯೋಗವನ್ನು ಪಡೆದುಕೊಳ್ಳಲು ಸಾರ್ವಜನಿಕರಿಂದ ಚುನಾಯಿತ ಪ್ರತಿನಿಧಿಗಳಿಂದ ಹಲವಾರು ಮಾರ್ಗಗಳಲ್ಲಿ ಕೆ.ಎಸ್.ಆರ್.ಟಿ.ಸಿ. ನಗರ ಸಾರಿಗೆ ಸೌಲಭ್ಯಗಳನ್ನು ಸ್ಟೇಟ್ ಬ್ಯಾಂಕ್ ನಿಂದ ಕಲ್ಪಿಸುವಂತೆ ಬೇಡಿಕೆಗಳು ಬಂದಿರುತ್ತವೆ.

ಮುಂದುವರಿದು ಮಂಗಳೂರು ನಗರದ ಕೇಂದ್ರ ಭಾಗದಲ್ಲಿ ಸಾರ್ವಜನಿಕ ಸರಕಾರಿ ಆಸ್ಪತ್ರೆಗಳಾದ ಲೇಡಿಗೋಷನ್ ಮತ್ತು ವೆನ್‌ಲಾಕ್ ಆಸ್ಪತ್ರೆ ,ಸರ್ಕಾರದ ವಿವಿಧ ಕಛೇರಿಗಳು, ಮಾರುಕಟ್ಟೆ ಕೇಂದ್ರ ರೇಲ್ವೆ ನಿಲ್ದಾಣ ಹಾಗೂ ಶಾಲಾ ಕಾಲೇಜುಗಳಿಗೆ ನಿತ್ಯ ಸಾವಿರಾರು ವಿದ್ಯಾರ್ಥಿಗಳು ಹಾಗೂ ಪ್ರಯಾಣಿಕರ ಸಂಚರಿಸುತ್ತಿದ್ದು ಅದರಲ್ಲಿ ವಿಶೇಷವಾಗಿ ಮಹಿಳಾ ಪ್ರಯಾಣಿಕರಿಗೆ ಹೆಚ್ಚಿಗೆ ಸಾರಿಗೆ ಸೌಲಭ್ಯ ಮತ್ತು ಶಕ್ತಿಯೋಜನೆಯ ಲಾಭ/ಸದುಪಯೋಗವನ್ನು ಪಡೆದುಕೊಳ್ಳಲು ಹಾಗೂ ಮಾನ್ಯ ಜಿಲ್ಲೆಯ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without preayment **WPP No. 297**



ಉಸ್ತುವಾರಿ ಸಚಿವರಿಗೆ, ಮಾನ್ಯ ವಿಧಾನ ಸಭಾ ಅಧ್ಯಕ್ಷರಿಗೆ, ಮಾನ್ಯ ಸಂಸದರಿಗೆ, ಮಾನ್ಯ ಶಾಸಕರಿಗೆ ಹಾಗೂ ವಿವಿಧ ಜನಪ್ರತಿಗಳು, ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿರುವ ಮನವಿಗಳು ಮತ್ತು ನಗರದ ಹಾಗೂ ಜಿಲ್ಲೆಯ ವಿವಿಧ ಸಂಸ್ಥೆಗಳು, ಸಂಘಟನೆಗಳು ಹಾಗೂ ವಿದ್ಯಾರ್ಥಿಗಳು ಸಲ್ಲಿಸಿರುವ ಮನವಿಗಳ ಮೇರೆಗೆ ಇನ್ನೂ ಹೆಚ್ಚಿನ ಸಂಖ್ಯೆಯ ಕೆ.ಎಸ್.ಆರ್.ಟಿ.ಸಿ. ನಗರ ಸಾರಿಗೆಗಳನ್ನು ಪ್ರಾರಂಭಿಸುವ ಅವಶ್ಯಕತೆ ಇರುತ್ತದೆ.

ಮುಂದುವರೆದು 1993 ರಿಂದ ಇಲ್ಲಿಯವರೆಗೆ ಸದರಿ ಆದೇಶವು ರಾಜ್ಯ ಸಾರಿಗೆ ಸಂಸ್ಥೆಗೆ ಸಂಬಂಧಪಟ್ಟಂತೆ ಸೂಕ್ತವಾಗಿ ಪರಿಷ್ಕರಣೆ ಆಗದೆ ಇರುವುದರಿಂದ ರಾಜ್ಯ ಸಾರಿಗೆ ಸಂಸ್ಥೆಗೆ ಮಂಗಳೂರು ಕೇಂದ್ರ ಭಾಗದಿಂದ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಲು ಆಗಿರುವುದಿಲ್ಲ ಹಾಗೂ 1993 ರ ನಂತರ ರಾಜ್ಯ ಸಾರಿಗೆ ಸಂಸ್ಥೆಗೆ ಮಂಜೂರು ಮಾಡಲಾದ ಹಲವಾರು ಪರವಾನಿಗೆಗಳು ಸದರಿ ಅಧಿಸೂಚನೆಯಿಂದ ಮಾನ್ಯ ಉಚ್ಚನ್ಯಾಯಾಲಯದಲ್ಲಿ ದಾವೆಗಳು ದಾಖಲಾಗುತ್ತಿವೆ. ಆದ್ದರಿಂದ ಜಿಲ್ಲಾಧಿಕಾರಿಗಳ ಅಧಿಸೂಚನೆ ಸಂಖ್ಯೆ:ಆರ್.ಟಿ.ಎ:ಸಿಆರ್:268/90-91 ದಿನಾಂಕ:05-01-1991 ಮತ್ತು ಅಧಿಸೂಚನೆ ಸಂಖ್ಯೆ:ಆರ್.ಟಿ.;ಸಿಆರ್:182/92-93, ದಿ:06-04-1993 ರ ಅಧಿಸೂಚನೆಯಲ್ಲಿ ಈ ಕೆಳಗಿನಂತೆ ಮಾರ್ಪಡಿಸಿ ಆದೇಶಿಸಿದೆ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಅನುಸಾರ **ದರ್ಶನ್ ಎಚ್.ವಿ. ಭಾ.ಆ.ಸೇ.,** ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಮೋಟಾರು ವಾಹನ ಕಾಯ್ದೆ, 1988 ರ ಕಲಂ 115 ರಂತೆ ಹಾಗೂ ಕರ್ನಾಟಕ ಮೋಟಾರು ವಾಹನಗಳ ನಿಯಮಾವಳಿ, 1989 ರ ನಿಯಮ 221 (ಎ) (5) ರ ಅಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಮಂಗಳೂರು ನಗರದಲ್ಲಿರುವ ಜನರ ಹಾಗೂ ವಿದ್ಯಾರ್ಥಿಗಳ ಅನುಕೂಲಕ್ಕಾಗಿ, ಮಹಿಳಾ ಪ್ರಯಾಣಿಕರಿಗೆ ಘನ ಸರ್ಕಾರದ ಶಕ್ತಿ ಯೋಜನೆಯ ಉಪಯೋಗ ಪಡೆದುಕೊಳ್ಳಲು, ಸಾರ್ವಜನಿಕ ಆಸ್ಪತ್ರೆಗಳಿಗೆ ಬರುವಂತಹ ರೋಗಿಗಳ ಅನುಕೂಲಕ್ಕಾಗಿ, ಪ್ರಯಾಣಿಕರ ಅನುಕೂಲ ಮತ್ತು ಸುರಕ್ಷತೆಯ ಹಿತದೃಷ್ಟಿಯಿಂದ, ಮಂಗಳೂರು ನಗರದ ಕೇಂದ್ರ ಭಾಗದಲ್ಲಿ ಸಾರ್ವಜನಿಕ ಸಮೂಹ ಸಾರಿಗೆಯನ್ನು ಉತ್ತೇಜಿಸಲು ಮತ್ತು ವೈಯಕ್ತಿಕ ವಾಹನಗಳ ಬಳಕೆಯನ್ನು ಕಡಿಮೆಮಾಡಲು ಈ ಕಛೇರಿಯ ಅಧಿಸೂಚನೆ ಸಂ:ಆರ್.ಟಿ.ಎ.ಸಿಆರ್:268/90-91 ದಿನಾಂಕ:05-01-1991 ಮತ್ತು ಅಧಿಸೂಚನೆ ಸಂಖ್ಯೆ:ಆರ್.ಟಿ.ಎ.ಸಿಆರ್:182/92-93 ದಿನಾಂಕ:06-04-1993 ರಿಂದ ರಾಜ್ಯ ಸಾರಿಗೆ ಸಂಸ್ಥೆಯ ಎಲ್ಲಾ ವಾಹನಗಳಿಗೆ ವಿನಾಯಿತಿ ನೀಡಲಾಗಿದೆ.

ಈ ಅಧಿಸೂಚನೆಯು ದಿನಾಂಕ: 30.01.2026 ರಿಂದ ಮುಂದಿನ ಆದೇಶ ಹೊರಡಿಸುವವರೆಗೆ ಜಾರಿಯಲ್ಲಿರುತ್ತದೆ. ಈ ಅಧಿಸೂಚನೆಯನ್ನು ನನ್ನ ಸ್ವಹಸ್ತ ಸಹಿ ಹಾಗೂ ಮುದ್ರೆಯೊಂದಿಗೆ ಹೊರಡಿಸಿರುತ್ತೇನೆ.

ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

**PR-14**

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ವಿಭಾಗೀಯ ಮುದ್ರಣಾಲಯ, ಮೈಸೂರು.

VIJAY
NELAMANGALA
MUNIDALAPPA